ದಾನ ಮಾಡಿರಿ,
ಆದರೆ ಅದರಿಂದ
ಪ್ರತಿಫಲ
ನಿರೀಕ್ಷಿಸಬೇಡಿ.
ಅದು ತಾನಾಗಿಯೇ
ವಾಪಸ್ ಬರಲಿದೆ
-ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)
ಸಂಪಾದಕರು:ಸಿದ್ರಾಮಯ್ಯ ಸ್ವಾಮಿ
EDITOR:SIDRAMAYYA SWAMY

ಸೋತೆ ಎಂದು ನೀ
ಮುಂದಿಟ್ಟ ಹೆಜ್ಜೆ
ಹಿಂದಿಡಬೇಡ...
ಏಕೆಂದರೆ...
ಯಾರಿಗೆ ಗೊತ್ತು ಆ ಹೆಜ್ಜೆ
ನಿನ್ನ ಇತಿಹಾಸವನೇ ಸೃಷ್ಟಿ
ಮಾಡುವ
ಹೆಜ್ಜೆಯಾಗಿರಬಹುದು...

bidarvani.com | ಇ-ಪೇಪರ್bidarvani.online | bidarvani | bidarvani@gmail.com | Whatsapp | Contact:9148471077

KARKAN/77693/2019 | ಸಂಪುಟ:08 | ಸಂಚಿಕೆ:185 | ದಿನಾಂಕ:21.10.2025 | ಮಂಗಳವಾರ | ಪುಟ.4 | ಬೆಲೆ:02 ರೂ | ಮೊ.9945793175

## ಹೊನ್ನಿಕೇರಿ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ನೂತನ ಗೋಪುರದ ಕಳಸಾರೋಹಣ, ಲಕ್ಷ ದೀಪೋತ್ಸವ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತೆ ಸಭೆ



ಬೀದರ.ಅ.20:ಹಲವು ವಿಸ್ಮಯಗಳನ್ನು ಒಡಲಲ್ಲಿ ಇಟ್ಟು ಕೊಂಡಿರುವ ಹೊನ್ನಿಕೇರಿ ಸಿದ್ದೇಶ್ವರ ದೇವಾಲಯವು ಬೀದರ್ ಜಿಲ್ಲೆಯ, ಬೀದರ್ ತಾಲೂಕಿನ ಹೊನ್ನಿಕೇರಿ ಗ್ರಾಮದಲ್ಲಿ ಬೆಟ್ಟದ ಮೇಲೆ ನೆಲೆಗೊಂಡಿರುವ ಒಂದು ಶತಮಾನದಷ್ಟು ಹಳೆಯ ಸುಪ್ರಸಿದ್ಧ ದೇವಾಲಯವಾಗಿದೆ. ಈ ದೇವಾಲಯಕ್ಕೆ ನಮ್ಮ ರಾಜ್ಯ ಸೇರಿ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ರಾಜ್ಯಗಳಿಂದಲೂ ಭಕ್ತರನ್ನು ಆಕರ್ಷಿಸುತ್ತದೆ ದೇವಸ್ಥಾನದ ಅಭಿವೃದ್ಧಿಗಾಗಿ ನಾವೆಲ್ಲರೂ ಹಗಲಿರುಳು ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಸುಪ್ರಸಿದ್ಧ ಶ್ರೀ ಹೊನ್ನಿಕೇರಿ ಸಿದ್ಧೇಶ್ವರ ದೇವಸ್ಥಾನದಲ್ಲಿ ನವೆಂಬರ್ 10, 11 ಮತ್ತು 12ರಂದು ನಡೆಯಲಿರುವ ನೂತನ ಗೋಪುರದ ಕಳಸಾರೋಹಣ ಹಾಗೂ ಲಕ್ಷ ದೀಪೋತ್ಸವ, ವಿಶ್ವ ಕಲ್ಯಾಣ ಲೋಕ ಕಲ್ಯಾಣ, ಗ್ರಾಮ ಕಲ್ಯಾಣ ವಿಶೇಷ ಪೂಜೆ ಕಾರ್ಯಕ್ರಮದ ಪೂರ್ವ ಭಾವಿ ಸಿದ್ದತೆ ಪ್ರಯುಕ್ತ ಇಲಾಖೆಗಳ ಅಧಿಕಾರಿಗಳೊಂದಿಗೆ ದೇವಸ್ಥಾನದ ಆವರಣದಲ್ಲಿ ಸಭೆ ನಡೆಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ಶ್ರೀ ಶ್ರೀ 10008 ಜಗದ್ಗುರುಗಳವರ ದಿವ್ಯ ಸಾನಿಧ್ಯದಲ್ಲಿ ನಡೆಯಲಿರುವ ಈ ಭವ್ಯ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಯೋಜಿಸಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡು ಭಕ್ತರಿಗೆ ಯಾವುದೇ ರೀತಿಯ ಅನಾನುಕೂಲ ಉಂಟಾಗದಂತೆ ಎಲ್ಲಾ ವ್ಯವಸ್ಥೆಗಳನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಗ್ರಾಮಸ್ಥರು ಸಹ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಹೊನ್ನಿಕೇರಿ ಗ್ರಾಮದ ಬೆಟ್ಟದ ನಡುವೆ ಇರುವ ಶ್ರೀ ಕ್ಷೇತ್ರ ಹೊನ್ನಿಕೇರಿ ಸಿದ್ದೇಶ್ವರ ದೇಗುಲ. ಶತಮಾನದಷ್ಟು ಪುರಾತನವಾದ ಈ ದೇವಾಲಯ, ಹಲವು ವಿಭಿನ್ನ ವಿಸ್ಮಯಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿದೆ. ಬೀದರ್ ಜಿಲ್ಲೆಯ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿರುವ ಈ ದೇಗುಲಕ್ಕೆ ನಮ್ಮ ರಾಜ್ಯ ಸೇರಿ ಆಂಧ್ರ ಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಅನೇಕ ರಾಜ್ಯಗಳಿಂದ ಭಕ್ತರ ದಂಡು ಹರಿದು ಬರುತ್ತದೆ.

ದೇಗುಲದ ಸುತ್ತ ನೀರಿನ ಹೊಂಡಗಳು ಇದ್ದು, ನೀರು ಕುಡಿದರೆ ದೇವರ ಆಶೀರ್ವಾದ ದೊರೆಯುತ್ತದೆ ಎನ್ನುವುದು ಭಕ್ತರ ನಂಬಿಕೆಯಾಗಿದೆ. ಪ್ರತಿ ಅಮಾವಾಸ್ಯೆ, ಹುಣ್ಣಿಮೆ ಕೂಡಾ ಸಾವಿರಾರು ಭಕ್ತರು ಇಲ್ಲಿಗೆ ಬಂದು ತಮ್ಮಗೆ ಬರುವ ಭಕ್ತರು ದೇವರಿಗೆ ಹರಕೆ ರೂಪದಲ್ಲಿ ಪ್ರತಿಯೊಂದು ಮೆಟ್ಟಿಲಿಗೆ ದೀಪ ಹಚ್ಚಿ ತೆಂಗಿನಕಾಯಿ ಒಡೆದು ದೇವರಿಗೆ ಪೂಜೆ ಸಲ್ಲಿಸುವುದು ವಿಶೇಷ.

ಇಲ್ಲಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಬಂದು ಹರಕೆ ತಿರಿಸಿ ದೇವರ ದರ್ಶನ ಪಡೆದುಕೊಂಡು ಹೋಗುತ್ತಾರೆ. ದೇವಸ್ಥಾನಕ್ಕೆ ಬರುವ ಭಕ್ತರಿಗೆ ಉತ್ತಮ ಮೂಲ ಸೌಕರ್ಯ ಕಲ್ಪಿಸಬೇಕು. ಮುಜರಾಯಿ ಇಲಾಖೆಯ ಸುಪರ್ದಿಗೆ ಬರುವ ಈ ದೇವಸ್ಥಾನಕ್ಕೆ ಕೊಟ್ಯಾಂತರ ರೂಪಾಯಿ ಹಣ ಹರಿದುಬರುತ್ತದೆ ಅದರಿಂದ ಇನ್ನಷ್ಟು ಅಭಿವೃದ್ಧಿ ಪಡಿಸಲಾಗುವುದು.

ದೇವಸ್ಥಾನಕ್ಕೆ ಬರುವ ಸಾವಿರಾರು ಭಕ್ತರಿಗಾಗಿ ಯಾತ್ರಿ ನಿವಾಸ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಇನ್ನೇನೂ ಕಾಮಗಾರಿ ಪ್ರಾರಂಭಿಸಲಾಗುವುದು ನನ್ನ ಅನುದಾನದಲ್ಲಿ ಸಹ ವಿವಿಧ ಯೋಜನೆಗಳು ರೂಪಿಸಿ ಹೆಚ್ಚಿನ ಅಗತ್ಯ ಕಾಮಗಾರಿ ಕೈಗೊಂಡು ಅಭಿವೃದ್ಧಿ ಪಡಿಸಲಾಗುವುದು ಎಂದು ಹೇಳಿದರು.

ಸಭೆಯು ನಂತರ ಶಾಸಕರು ಅಧಿಕಾರಿಗಳು ಮತ್ತು ಗ್ರಾಮಸ್ಥರೊಂದಿಗೆ ಸೇರಿ ಕಾರ್ಯಕ್ರಮದ ಸ್ಥಳ ಪರಿಶೀಲನೆ ನಡೆಸಿದರು.

## ಭಾಲ್ಕಿ ಪಟ್ಟಣದಲ್ಲಿ ಶತಾಬ್ದಿ ನಿಮಿತ್ತ ಆರ್‌ಎಸ್‌ಎಸ್‌ನಿಂದ ಭವ್ಯ ಪಥಸಂಚಲನ

ಭಾಲ್ಕಿ.ಅ.20:ಪಟ್ಟಣದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ(ಆರ್‌ಎಸ್‌ಎಸ್) ಶತಾಬ್ದಿ ಮತ್ತು ವಿಜಯದಶಮಿ ನಿಮಿತ್ತ ಭವ್ಯ ಪಥಸಂಚಲನ ಸಾಗಿತು. ಭಾಲ್ಕೇಶ್ವರ ಮಂದಿರ ಆವರಣದಲ್ಲಿ ಶನಿವಾರ ಸಾವಿರಾರು ಗಣ ವೇಷಧಾರಿಗಳು ಜಮಾಗೊಂಡು ತಾಯಿ ಭಾರತಾಂಬೆ, ಕೇಶವ ಬಲಿರಾಮ ಹೆಡಗೇವಾರ್ ಹಾಗೂ ಮಾಧವ ಸದಾಶಿವ ಗೋಳ್ವಾಲ್ಕರ್ ಭಾವಚಿತ್ರಗಳೊಂದಿಗೆ ಪಥಸಂಚಲನ ಆರಂಭಿಸಿದರು.


ಮಾರ್ಗದುದ್ದಕ್ಕೂ ಜನರು ರಂಗೋಲಿ ಹಾಕಿ ಹೂವಿನ ಮಳೆಗೈದರು. ಖಾಕಿ ಬಣ್ಣದ ಪ್ಯಾಂಟ್, ಶುಭ್ರ ಬಿಳಿ ವರ್ಣದ ಅಂಗಿ, ತಲೆಗೆ ಕರಿ ಟೋಪಿ ಧರಿಸಿ ಕೈಯಲ್ಲಿ ದಂಡವನ್ನು ಹಿಡಿದಿದ್ದ ಸ್ವಯಂಸೇವಕರು ಗಮನ ಸೆಳೆದರು. ಭಾರತ ಮಾತಾಕಿ ಜೈ , ಜೈ ಶ್ರೀರಾಮ್ ಎನ್ನುವ ಜಯಘೋಷ ಮೊಳಗಿದವು.

ಹಳೇ ಪಟ್ಟಣ, ಚವಡಿ, ತಿನ್ ದುಕಾನ್, ಗಡಿ ಏರಿಯಾ, ಬೋಮಗೊಂಡೇಶ್ವರ ವೃತ್ತ, ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ, ಸಂಗಮೇಶ್ವರ ಚಿತ್ರ ಮಂದಿರ, ಮಹಾತ್ಮ ಗಾಂಧಿ ವೃತ್ತ, ಬಸವೇಶ್ವರ ವೃತ್ತದ ಮೂಲಕ ಚನ್ನಬಸವಾಶ್ರಮದಲ್ಲಿ ಸಮಾಪ್ತಿಗೊಂಡಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಪ್ರಕಾಶ ಖಂಡ್ರೆ, ಯುವ ಮುಖಂಡ ಡಿ.ಕೆ.ಸಿದ್ರಾಮ, ಪ್ರಮುಖರಾದ ಶಿವು ಲೋಖಂಡೆ, ವೀರಣ್ಣ ಕಾರಬಾರಿ, ಚನ್ನಬಸವಣ್ಣ ಬಳತೆ, ಪ್ರಸನ್ನ ಖಂಡ್ರೆ, ಸುಧೀರ ನಾಯ್ಕ್, ಸೂರಜ ಸಿಂಗ ರಾಜಪೂತ, ಪ್ರಭು ಧೂಪೆ, ನಾಮದೇವರಾವ ಪವಾರ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಗಣವೇಶಧಾರಿಗಳು ಭಾಗವಹಿಸಿದ್ದರು.



## 151 ಜೋಡಿಗಳ ಸಾಮೂಹಿಕ ವಿವಾಹ



ಬೀದರ್.ಅ.20:ನಗರದ ನೌಬಾದ್‌ನ ರಾಜೀವಗಾಂಧಿ ಪದವಿಪೂರ್ವ ಕಾಲೇಜು ಆವರಣದಲ್ಲಿ ಈಚೆಗೆ ಸರಳ ಸಾಮೂಹಿಕ ವಿವಾಹ ನಡೆಯಿತು.

151 ಜೋಡಿಗಳು ಪರಸ್ಪರ ಹಾರ ಬದಲಾಯಿಸಿಕೊಂಡು ಸತಿ-ಪತಿಗಳಾದರು. ವಿವಾಹ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಸಂಸದ ಸಾಗರ್ ಖಂಡ್ರೆ ಅವರು, ಸರಳ ಸಾಮೂಹಿಕ ವಿವಾಹಗಳಿಂದ ಬಡವರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದರು.ಮದುವೆ ಹೆಸರಲ್ಲಿ ದುಂದು ವೆಚ್ಚ ಮಾಡಬಾರದು ಎಂದು ಸಲಹೆ ಮಾಡಿದರು.

ಆಣದೂರಿನ ಭಂತೆ ಧಮ್ಮಾನಂದ ಸಾನಿಧ್ಯ, ಖರ್ಗೆ ಶಾರದಾಬಾಯಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಚಪ್ಪ ಮಾಣಿಕರಾವ್ ಖರ್ಗೆ ಅಧ್ಯಕ್ಷತೆ ವಹಿಸಿದ್ದರು. ಜನತಾ ಪ್ರವೀಣ್ ಶಿಕ್ಷಣ ಸಂಸ್ಥೆಯ ಗೌರವಾಧ್ಯಕ್ಷ ಯುಗಪುರುಷ ಜೈರಾಜ ಚತುರೆ, ಕಾರ್ಯಕ್ರಮದ ಸಂಯೋಜಕ ಭೀಮರಾವ್ ಮಾಲಗತ್ತಿ, ಮುಖಂಡರಾದ ವಿನೋದಕುಮಾರ ಅಪ್ಪೆ,ಹಣಮಂತ ಮಲ್ಕಾಪುರ, ಸೂರ್ಯಕಾಂತ ಸಾಧುರೆ, ಅನಿಲಕುಮಾರ ಮೇಲ್ದೊಡ್ಡಿ, ವಿಠ್ಠಲದಾಸ್ ಪ್ಯಾಗೆ, ಧನರಾಜ ಹಂಗರಗಿ, ಮುಕೇಶ್ ಚಲ್ವಾ, ಪವನ್ ಮಿಠಾರೆ, ಮಾಣಿಕರಾವ್ ಮೇತ್ರೆ, ಶರಣಪ್ಪ ಚಂದನಹಳ್ಳಿ, ಮಲ್ಲಿಕಾರ್ಜುನ ಕಪಲಾಪುರೆ, ಮಿಲಿಂದ ಕಾಂಬಳೆ, ಅಮರ ಸಾಗರ್, ರಮಾದೇವಿ ಸ್ವಾಮಿ, ದಿಲೀಪ್, ಹರೀಶ್, ಗೌತಮ ಮುತ್ತಂಗಿಕರ್, ಚಂದ್ರಕಾಂತ ಕಾಂಬಳೆ, ದೇವರಾಜ ಪಾಟೀಲ, ರಾಜಶೇಖರ ಸೋರಳ್ಳಿ ಮತ್ತಿತರರು ಇದ್ದರು.

ಖರ್ಗೆ ಶಾರದಾಬಾಯಿ ಎಜುಕೇಷನಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್, ಜನತಾ ಪ್ರವೀಣ ಶಿಕ್ಷಣ ಸಂಸ್ಥೆ ಹಾಗೂ ಖರ್ಗೆ ಮಾಣಿಕರಾವ್ ಮೆಮೊರಿಯಲ್ ಶಿಕ್ಷಣ ಸಂಸ್ಥೆ ವತಿಯಿಂದ ಸಾಮೂಹಿಕ ವಿವಾಹ ಹಮ್ಮಿಕೊಳ್ಳಲಾಗಿತ್ತು.

## ದ್ವೇಷ ಮತ್ತು ಅಹಂಕಾರ ಮುಕ್ತ ಸಮಾಜ ನಿರ್ಮಾಣ ಮಾಡೋಣ-ಸಾಹಿತಿ ಶರಣಬಸಪ್ಪ ಫುಲೆ

ಬೀದರ್.ಅ.20:ಮಹಾತ್ಮ ಜ್ಯೋತಿಭಾ ಫುಲೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ ಸಂಸ್ಥೆ ವತಿಯಿಂದ ಧ್ಯಾನ ಹಾಗೂ 'ಬುದ್ಧ ಮತ್ತು ಧಮ್ಮ' ಕುರಿತ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಬೀದರ ನಗರದ ನೌಬಾದ್‌ನ ಶ್ರೀ ರಾಘವೇಂದ್ರ ಕಾಲೋನಿಯ ನಿವೇದಿತಾ ಹೂಗಾರ ಟ್ರೈನರ್ ಅಕಾಡೆಮಿ ಸಭಾಂಗಣದಲ್ಲಿ ಆಯೋಜಿಸಲಾಯಿತು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಭಂತೆಜೀ ಅವರ ನೇತೃತ್ವದಲ್ಲಿ ನೆರವೇರಿಸಲಾಯಿತು. ಸಾಹಿತಿ ಶರಣಬಸಪ್ಪ ಫುಲೆ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅವರು ತಮ್ಮ ಭಾಷಣದಲ್ಲಿ "ದ್ವೇಷ ಮತ್ತು ಅಹಂಕಾರ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಪ್ರತಿಯೊಬ್ಬರೂ ಶ್ರಮ ವಹಿಸಬೇಕು. ಇಂದಿನ ಯುಗದಲ್ಲಿ ಸುಖ, ಶಾಂತಿ, ನೆಮ್ಮದಿ ಮತ್ತು ಆರೋಗ್ಯ ಕಳೆದುಕೊಂಡಿದ್ದಾರೆ. ಧ್ಯಾನ ಮತ್ತು ಧಮ್ಮದ ಮಾರ್ಗದಿಂದ ಇವುಗಳನ್ನು ಮರಳಿ ಪಡೆಯಬಹುದು," ಎಂದು ಹೇಳಿದರು.

ಡಾ. ಕಾಶೀನಾಥ ಚಲ್ವಾ ಅವರು ಉದ್ಘಾಟಕರಾಗಿ ಬಂದು ಬುದ್ಧ ಮತ್ತು ಆತನ ಧಮ್ಮ ಪವಿತ್ರ ಗ್ರಂಥದ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಹುಲಸೂರು ತಹಸಿಲ್ದಾರರು ಶಿವಾನಂದ ಮೇತ್ರೆ ಅವರು "ಒಳ್ಳೆಯ ಕೆಲಸಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು" ಎಂದು ಹೇಳಿದರು.

ಮಾಸ್ಟರ್ ಮೈಂಡ್ ಟ್ರೈನರ್ ಶ್ರೀಮತಿ ಶ್ರೀದೇವಿ ಹೂಗಾರ ಅವರು "ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡುವುದು ಸಮಾಜದ ಮೂಲ ಅಸ್ತಿವಾರ" ಎಂದು ಅಭಿಪ್ರಾಯಪಟ್ಟರು. ಬಸವಕಲ್ಯಾಣದ ಶಿಕ್ಷಕಿ ಉಷಾ ಯಾದಾರಾವ್ ಗಾಯಕ್ವಾಡ್ ಹಾಗೂ ಕಲ್ಲಪ್ಪ ಕೈವಾರೆ ಅವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಭರತ್ ಕಾಂಬಳೆ, ಧನರಾಜ್ ಮುಸ್ತಪುರೆ, ಶಕ್ತಿಕಾಂತ್ ಭಾವಿ ದೊಡ್ಡಿ, ನಿಂಗಪ್ಪ ನಿಣ್ಣೆ, ಪ್ರದೀಪ್ ನಾಟೇಕರ್, ಪ್ರಕಾಶ್ ರಾವಣ್, ಶಂಭುಲಿಂಗ ವಾಲ್ದೊಡ್ಡಿ, ರಾಜಕುಮಾರ ಜಾಂತಿಕರ ಮೊದಲಾದವರಿಗೆ ಸನ್ಮಾನಿಸಲಾಯಿತು.

ಪ್ರತಿಭಾ ಪುರಸ್ಕಾರವಾಗಿ ಪ್ರಸನ್ನ ಕುಮಾರಿ, ಪ್ರಕೃತಿ, ಅಶ್ವಿನಿ ಮತ್ತು ಇತರ ವಿದ್ಯಾರ್ಥಿಗಳಿಗೆ ಗೌರವಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಕಲಾವಿದರಾದ ಪ್ರೇಮಲತಾ ದೊಡ್ಡಿ ಹಾಗೂ ಜಗದೇವಿ ಫುಲೆ ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆಯನ್ನು ರಾಜಕುಮಾರ ಕರುಣಾಸಾಗರ್ ನೆರವೇರಿಸಿದರು.



# ಡಾ.ಬರಗೂರು ರಾಮಚಂದ್ರಪ್ಪನವರು ಪ್ರಗತಿಪರ ಚಿಂತಕ, ಬಂಡಾಯ ಸಾಹಿತಿ



ಕಲಬುರಗಿ:ಅ.20 :ಸಮಾಜದಲ್ಲಿರುವ ತಳಮಟ್ಟದ ಸಮುದಾಯ, ಅಸಹಾಯಕರು, ಧ್ವನಿಯಿಲ್ಲದವರ ಬಗ್ಗೆ ತಮ್ಮ ಆಳವಾದ ಚಿಂತನೆಯ ಸಾಹಿತ್ಯದ ಮೂಲಕ ಸಮಾಜವನ್ನು ಜಾಗೃತಗೊಳಿಸುತ್ತಿರುವ ಬಂಡಾಯ ಸಾಹಿತಿ ಡಾ.ಬರಗೂರು ರಾಮಚಂದ್ರಪ್ಪನವರು ಶ್ರೇಷ್ಠ ಚಿಂತಕ,ಲೇಖಕ, ಕಾದಂಬರಿಕಾರರಾಗಿದ್ದಾರೆ ಎಂದು ಉಪನ್ಯಾಸಕ, ಲೇಖಕ ಎಚ್.ಬಿ.ಪಾಟೀಲ ಹೇಳಿದರು.

ನಗರದ ಆಳಂದ ರಸ್ತೆಯ ಖಾದ್ರಿ ಚೌಕ್ ಸಮೀಪವಿರುವ 'ಸನಲೈಟ್ ಟ್ಯುಟೋರಿಯಲ್ಸ್'ನಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ಡಾ. ಬರಗೂರು ರಾಮಚಂದ್ರಪ್ಪನವರ 79ನೇ ಜನ್ಮದಿನಾಚರಣೆ'ಯ ಪ್ರಯುಕ್ತ ಬರಗೂ???ರ ಬದುಕು-ಬರಹ ವಿಶೇಷ ಉಪನ್ಯಾಸ ಕಾರ್ಯಕ್ರಮದಲಿ ಅವರು ಮಾತನಾಡಿದರು.

ಡಾ.ಬರಗೂರು ಅವರಲ್ಲಿರುವ ಸಮಾಜಪರ ಕಾಳಜಿ, ವೈಚಾರಿಕ ಪ್ರಜ್ಞೆ ಶ್ಲಾಘನೀಯವಾಗಿದೆ. ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕನ್ನಡ ಅಧ್ಯಾಪಕರಾಗಿ, ಆ ಬಳಿಕ ಎರಡು ವರ್ಷ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡ ನಾಡಿನ ಪ್ರಮುಖ ಚಿಂತಕರು ಮತ್ತು ಬಂಡಾಯ ಸಾಹಿತ್ಯ ಚಳುವಳಿಯ ನೇತಾರರಲ್ಲಿ ಪ್ರಮುಖರಾಗಿದ್ದಾರೆ. ಅವರು ಹಲವು ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. ಕನಸಿನ ಕನ್ನಿಕೆ,

ಮರಕುಟಿಗ, ನೆತ್ತರಲ್ಲಿ ನೆಂದು ಹೂವು, ಗುಲಾಮಗೀತೆ, ಮಗುವಿನ ಹಾಡು, ಕಾಂಟೆಸ್ಸಾದಲ್ಲಿ ಕಾವ್ಯ, ಸುಂಟರಗಾಳಿ, ಬಯಲಾಟ ಭೀಮಣ್ಣ, ಒಂದು ಊರಿನ ಕತೆಗಳು, ಕಪ್ಪು ನೆಲದ ಕೆಂಪುಕಾಲು, ಸೂತ, ಸೀಳುನೆಲ, ಸಂಗಪ್ಪನ ಸಾಹಸಗಳು, ಬೆಂಕಿ,ಸೂರ್ಯ,ಭರತನಗರಿ,ಕೋಟೆ, ಗಾಜಿನ ಮನೆ, ಸ್ವಪ್ನ ಮಂಟಪ,ಶಬರಿ ಸೇರಿದಂತೆ ಇನ್ನಿತರ ಕೃತಿಗಳನ್ನು ರಚಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಸಾಪ ಉತ್ತರ ವಲಯದ ಗೌರವ ಅಧ್ಯಕ್ಷ ಶಿವಯೋಗೆಪ್ಪಾ ಎಸ್.ಬಿರಾದಾರ, ಸಮಾಜ ಸೇವಕರಾದ ಅಸ್ಲಾಂ ಶೇಖ್, ಸೈಯದ್ ಹಮೀದ್ ಹಾಗೂ ವಿದ್ಯಾರ್ಥಿಗಳಿದ್ದರು.

# ಕನ್ನಡ ರಾಜ್ಯೋತ್ಸವವನ್ನು ಹಬ್ಬದಂತೆ ಅದ್ದೂರಿಯಾಗಿ ಆಚರಿಸಲು ಸಿದ್ಧತೆ ಕೈಗೊಳ್ಳಿ:ಜಿಲ್ಲಾಧಿಕಾರಿ ಡಾ.ಆನಂದ.ಕೆ

ವಿಜಯಪುರ,ಅ.20:ಕನ್ನಡ ರಾಜ್ಯೋತ್ಸವದ ಆಚರಣೆ ಹಬ್ಬದ ವಾತಾವರಣದ ರೀತಿಯಲ್ಲಿ, ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಆಯಾ ಇಲಾಖೆ ಅಧಿಕಾರಿಗಳು ಈ ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಆನಂದ ಕೆ ಅವರು ಸೂಚಿಸಿದರು.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಈ ಬಾರಿಯ ಕರ್ನಾಟಕ ರಾಜ್ಯೋತ್ಸವ ಆಚರಣೆ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದರು.

ಕನ್ನಡ ನಾಡು, ನುಡಿಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ರಾಜ್ಯೋತ್ಸವ ಕಾಯರ್ಕ್ರಮವನ್ನು ವ್ಯವಸ್ಥಿತವಾಗಿ ನಿರ್ವಹಿಸಿ,ಕನ್ನಡಮಯ ಹಬ್ಬದ ವಾತಾವರಣ ಇರುವಂತೆ ಅಗತ್ಯ ಯೋಜನೆ ರೂಪಿಸುವಂತೆಯೂ, ಕನ್ನಡದ ಶ್ರೀಮಂತ ಪರಂಪರೆ ಕಲೆ ಹಾಗೂ ಸಂಸ್ಕೃತಿ ಪ್ರತಿಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಮ್ಮಿಳಿತಗೊಳಿಸಬೇಕು. ಶ್ರೀಮಂತ ಸಂಸ್ಕೃತಿಯ ಪರಿಚಯ ಮಾಡಿಕೊಡುವ ಕಲಾ ಪ್ರಕಾರಗಳನ್ನು ಆಯೋಜಿಸಲು ಯೋಜನೆ ರೂಪಿಸಿಕೊಳ್ಳುವಂತೆಯೂ, ರಾಜ್ಯೋತ್ಸವ ಕಾರ್ಯಕ್ರಮದ ಮೂಲಕ ನಾಡಿನ ಕಲೆ,ಸಂಸ್ಕೃತಿ, ಇತಿಹಾಸ, ಸಾಹಿತ್ಯದ ಹಿರಿಮೆ-ಗರಿಮೆ ಕುರಿತು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಬೇಕು. ಈ ನಿಟ್ಟಿನಲ್ಲಿ ಸಾಂಸ್ಕೃತಿಕವಾಗಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಹೇಳಿದರು.

ಕಾರ್ಯಕ್ರಮವು ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ವ್ಯವಸ್ಥಿತವಾಗಿ ಹಮ್ಮಿಕೊಳ್ಳಬೇಕು. ಅಂದು ಬೆಳಿಗ್ಗೆ 9ಗಂಟೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಂದ ಧ್ವಜಾರೋಹಣ ನೆರವೇರಲಿದೆ. ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ವಹಿಸಿದ್ದ ಎಲ್ಲ ಕೆಲಸ ಕಾರ್ಯಗಳನ್ನು ವ್ಯವಸ್ಥಿತವಾಗಿ ಕೈಗೊಳ್ಳಬೇಕು.

ಅಂದು ಬೆಳಿಗ್ಗೆ 7.30ಕ್ಕೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಭುವನೇಶ್ವರ ದೇವಿಯ ಭಾವಚಿತ್ರದ ಭವ್ಯ ಮೆರವಣಿಗೆಯನ್ನು ವಿವಿಧ ಇಲಾಖೆಗಳು ನಿರ್ಮಿಸಿರುವ ಸ್ಥಬ್ಧಚಿತ್ರಗಳು, ಕಲಾ ತಂಡದೊಂದಿಗೆ ನಗರದ ವಿವಿಧ ವೃತ್ತಗಳ ಮೂಲಕ ಜಿಲ್ಲಾ ಕ್ರೀಡಾಂಗಣಕ್ಕೆ ಆಗಮಿಸುವುದು. ವೇದಿಕೆ ಸಿದ್ಧತೆ, ಶಿಷ್ಟಾಚಾರದಂತೆ ಅತಿಥಿ ಗಣ್ಯರನ್ನು ಆಹ್ವಾನಿಸುವುದು. ಆಹ್ವಾನ ಪತ್ರಿಕೆಯ ಮುದ್ರಣ ಹಾಗೂ ವಿತರಣೆ, ಆಸನದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಸ್ವಚ್ಛತೆ ಕಾರ್ಯ ಕೈಗೊಳ್ಳಲು ನಿರ್ದೇಶಿಸಿದರು.

ನಗರದ ಎಲ್ಲಾ ಮುಖ್ಯ ವೃತ್ತಗಳ ಸ್ವಚ್ಛತೆ ಹಾಗೂ ವಿದ್ಯುತ್ ದೀಪಾಲಂಕಾರ ಕೈಗೊಳ್ಳುವ ಜವಾಬ್ದಾರಿಯನ್ನು ನಿರ್ವಹಿಸುವುದು, ಇನ್ನೀತರ ಕಾರ್ಯಕ್ರಮಗಳ ಕುರಿತು ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು.




# ಗಾರ್ಡನ್ ಜಾಗೆ ಸ್ವಚ್ಚಗೊಳಿಸಲು ವಾರ್ಡ ನಾಗರಿಕರ ಒತ್ತಾಯ



ತಾಳಿಕೋಟೆ:ಅ.20: ಪಟ್ಟಣದ ಟಿಪ್ಪು ನಗರ ಬಡಾವಣೆಯ ವಾರ್ಡ ನಂ.6 ಕ್ಕೆ ಸಂಬಂದಿಸಿ ಓಂ ಶಾಂತಿ ಇವರ ಮನೆಯ ಮುಂದಿನ ಪುರಸಭೆ ಗಾರ್ಡನ್ ಜಾಗೆಯಲ್ಲಿ ಅಕ್ರಮವಾಗಿ ಮರಳು, ಕಟ್ಟಿಗೆ,ಟ್ರ್ಯಾಕ್ಟರ್ ಸಾಮಾ ನುಗಳನ್ನು ಒಳಗೊಂಡು ಇನ್ನಿತರ ನಿರುಪಯುಕ್ತ ವಸ್ತುಗಳನ್ನು ಇಟ್ಟು ಸಂಪೂರ್ಣ ಗಲೀಜುಗೊಳಿಸಿದ್ದರಿಂದ ಆ ಸ್ಥಳದಲ್ಲಿ ವಿಷ ಜಂತುಗಳು ಕಾಣಿಸಿಕೊಳ್ಳುತ್ತಿದ್ದು ಕೂಡಲೇ ಗಾರ್ಡನ್ ಜಾಗೆಯನ್ನು ಸ್ವಚ್ಚಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ವಾಡಿರ್ನ ನಾಗರಿಕರು ಪುರಸಭೆ ಮುಖ್ಯಾಧಿಕಾರಿಗೆ ಶನಿವಾರ ರಂದು ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಪಟ್ಟಣದ ಸೌಂದಯರ್ಕರಣದ ದೃಷ್ಠಿಯಿಂದ ಹಾಗೂ ವಾಯುವಿಹಾರಿಗಳ ಅನುಕೂಲಕ್ಕಾಗಿ ಪುರಸಭೆ ವತಿಯಿಂದ ಗಾರ್ಡನ್ ಜಾಗೆಗಳನ್ನು ಮಿಸಲಿಡಲಾಗಿದೆ ಆದರೆ ಸದರಿ ಗಾರ್ಡನ್ ಜಾಗೆಗಳು ಸಾರ್ವಜನಿಕರಿಗೆ ಸದುಪಯೋಗವಾಗು ತ್ತಿಲ್ಲಾವೆಂದು ಮನವಿ ಪತ್ರದಲ್ಲಿ ತಿಳಿಸಿದ್ದಾರಲ್ಲದೇ ಪುರಸಭೆಯ ವಾರ್ಡ ನಂ. 6 ಕ್ಕೆ ಸಂಬಂದಿಸಿ ಇವರುವ ಗಾರ್ಡನ್ ಜಾಗೆಯಲ್ಲಿ ಇಲ್ಲ ಸಲ್ಲದ ನಿರೂಪಯುಕ್ತ ವಸ್ತುಗಳನ್ನು ಕೆಲವರು ಎಸೆದಿದ್ದಾರಲ್ಲದೇ ಇನ್ನೂ ಕೆಲವರು ತಮ್ಮ ಸ್ವಂತ ಮಾಲಿಕಿ ಜಾಗೆಯಂತೆ ಮರಳು-ಕಟ್ಟಿಗೆ ಅಲ್ಲದೇ ಟ್ರ್ಯಾಕ್ಟರ್ ಸಾಮಾನುಗಳನ್ನು ಇಡುವದರೊಂದಿಗೆ ಗಾಡರ್ನ್ ಜಾಗೆಯ ಅವ್ಯವಸ್ಥೆಗೆ ಕಾರಣವಾಗಿದ್ದು ಇದರಿಂದ ಹಗಲು ಹೊತ್ತು ಸದರಿ ಜಾಗೆಯಲ್ಲಿ ಮಕ್ಕಳು ಆಟವಾಡುವಾಗ ವಿಷ ಜಂತುಗಳು ಕಾಣಿಸಿಕೊಳ್ಳುತ್ತಾ ಸಾಗಿದ್ದರಿಂದ ಸುತ್ತಮುತ್ತಲಿನ ಪಾಲಕರಲ್ಲಿ ಭಯ ಹುಟ್ಟಿಸುವಂತೆ ಮಾಡಿದೆ ಈ ಬಡಾವಣೆಯಲ್ಲಿ ಸಾಕಷ್ಟು ಮನೆಗಳು ನಿರ್ಮಾಣವಾಗಿದ್ದು ರಾತ್ರಿ ಹೊತ್ತು ತಿರುಗಾಡಲು ವಿಷ ಜಂತುಗಳಿಂದ ಆತಂಕಗೊಂಡಿದ್ದಾರೆ ಕೂಡಲೇ ಸದರಿ ಗಾರ್ಡನ್ ಜಾಗೆಯನ್ನು ಸ್ವಚ್ಚಗೊಳಿಸುವದರೊಂದಿಗೆ ಸದರಿ ಸ್ಥಳದಲ್ಲಿ ಪುರಸಭೆ ಅಧಿಕಾರಿಗಳು ಪರಿಸರ ಸ್ನೇಹಿಯಾದ ಗಿಡಮರಗಳನ್ನು ನೆಡುವದರೊಂದಿಗೆ ಈ ಬಡಾವಣೆಯ ಜನರ ವಾಯು ವಿಹಾರಿಗಳ ಅನುಕೂಲಕ್ಕಾಗಿ ಖರ್ಚಿ ಇನ್ನಿತರಗಳನ್ನು ಹಾಕಿ ಬಡಾವಣೆಯ ಸ್ವಚ್ಚತೆಗೆ ಮುಂದಾಗಬೇಕೆಂದು ಸಲ್ಲಿಸಿದ ಮನವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಮನವಿ ಪತ್ರವನ್ನು ಪುರಸಭೆಯ ಕಂದಾಯ ನಿರೀಕ್ಷಕ ಸುರೇಶ ಅಂಬ್ರಣ್ಣವರ, ಆರೋಗ್ಯ ನಿರಿಕ್ಷಕ ಶಿವಾನಂದ ಜುಮನಾಳ ಅವರಿಗೆ ಬಡಾವಣೆಯ ನಾಗರಿಕರು ಸಲ್ಲಿಸಿದರು.

ಈ ಸಮಯದಲ್ಲಿ ಪುರಸಭೆ ಮಾಜಿ ಸದಸ್ಯ ಇಬ್ರಾಹಿಂ ಮನ್ಸೂರ, ಬಡಾವಣೆಯ ಮುಖಂಡರುಗಳಾದ ಮುರ್ತುಜಾ ಜಮಾದಾರ, ಮುರ್ತುಜಾಸಾಬ ನಮಾಜಕಟ್ಟಿ, ಶಿವಾನಂದ ಪಾಟೀಲ, ಅಮೀನಸಾಬ ಚೌದ್ರಿ, ರೀಯಾಜ ಮುಲ್ಲಾ, ಸಕೀನಾಬಿ ಲಾಹೋರಿ, ಇಕ್ಬಾಲ್ ಆಗ್ರಾ, ಅಬ್ದುಲ್‌ರಹಿಮಾನ ನಂದವಾಡಗಿ, ಇಮ್ರಾನ್ ನಮಾಜಕಟ್ಟಿ, ಆಶ್ರಫ ಜಮಾದಾರ, ಅಕ್ಬರ ಮುಲ್ಲಾ, ಆಲಸಮದ ಬಶಟ್ಯಾಳ, ಶಾಹನವಾಜ ದಖನಿ ಮೊದಲಾದವರು ಇದ್ದರು.

# ಆಳಂದದ ಮುಖ್ಯರಸ್ತೆ ಅಗಲೀಕರಣ ನ. 17ಕ್ಕೆ

ಆಳಂದ:ಅ.20:ಪಟ್ಟಣದ ಬಹುದಿನಗಳ ಕನಸೆ ಈಗ ರೂಪುಗೊಳ್ಳುತ್ತಿದೆ. ಮುಖ್ಯ ರಸ್ತೆಯ ಅಗಲೀಕರಣಕ್ಕೆ ನವೆಂಬರ್ 17ರಂದು ಚಿತ್ರಣೀಕರಣ (ಪಿಕ್ಸ್) ನಡೆಸಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಲಾಯಿತು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಅಧ್ಯಕ್ಷ ಫಿರದೋಸ್ ಅನ್ಸಾರಿ ಗೌಡಾ ಅಧ್ಯಕ್ಷತೆಯಲ್ಲಿ ಸಾಗಿದ ಸಾಮಾನ್ಯ ತುರ್ತು ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ, ಶಾಸಕ ಬಿ.ಆರ್. ಪಾಟಿೀಲ ಅವರ ಸಮ್ಮುಖದಲ್ಲಿ ಹಲವು ಪ್ರಮುಖ ನಿರ್ಧಾರಕ್ಕೆ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರು ಸರ್ವಾನುಮತದಿಂದ ಒಪ್ಪಿಗೆ ನೀಡಿದರು.

ಆಳಂದದ ಮಾಸ್ಟರ್ ಪ್ಲಾನ್ ಅಡಿಯಲ್ಲಿ ಮುಖ್ಯ ರಸ್ತೆಯ ಅಗಲೀಕರಣವನ್ನು ಬಿಸಿ-ಬಿಸಿ ಚರ್ಚಿಸಿ ಅಂತಿಮ ನಿರ್ಧಾರಕ್ಕೆ ಬರಲಾಯಿತು. ಈ ಯೋಜನೆಯು ಪಟ್ಟಣದ ಮುಖ್ಯ ರಸ್ತೆಯನ್ನು ದರ್ಗಾ ಚೌಕ್‌ನಿಂದ ಹಳೆಯ ತಹಸೀಲ್ದಾರ ಕಚೇರಿವರೆಗೆ ವಿಸ್ತರಿಸುವುದು, ಪಟ್ಟಣದ ಟ್ರಾಫಿಕ್ ಸಮಸ್ಯೆಗೆ ಇದು ಶಾಶ್ವತ ಪರಿಹಾರ. ಸಾರ್ವಜನಿಕರ ಸಹಕಾರದೊಂದಿಗೆ ನವೆಂಬರ್‌ನಲ್ಲಿ ಕೆಲಸ ಆರಂಭಿಸುತ್ತೇವೆ" ಎಂದು ಶಾಸಕ ಬಿ.ಆರ್.ಪಾಟೀಲ್ ಸಭೆಯಲ್ಲಿ ಹೇಳಿದರು.

ಪುರಸಭೆಯ ನಗರ ಸಭೆಯಾಗಿ ಉನ್ನತೀಕರಣ: ಸಭೆಯಲ್ಲಿ ಇನ್ನೊಂದು ಮಹತ್ವದ ನಿರ್ಧಾರವಾಗಿ ಪುರಸಭೆಯನ್ನು ನಗರಸಭೆಯಾಗಿ ಮೇಲ್ದರ್ಜೆಗೆ ಏರಿಸುವುದಕ್ಕೆ ಒಪ್ಪಂದ ಸೂಚಿಸಿ ಠರಾವು ಪ್ರಸ್ತಾಪಿಸಲು ನಿರ್ಧರಿಸಲಾಯಿತು.

ಪ್ರಸ್ತುತ ಆಳಂದ ಟೌನ್ ಮುನ್ಸಿಪಲ್ ಕೌನ್ಸಿಲ್ (ಟಿಎಂಸಿ) ಆಗಿ ಕಾರ್ಯನಿರ್ವಹಿಸುತ್ತಿದ್ದು, 27 ವಾರ್ಡ್‌ಗಳೊಂದಿಗೆ 35,000ಕ್ಕೂ ಹೆಚ್ಚು ಜನಸಂಖ್ಯೆಯನ್ನು ನಿರ್ವಹಿಸುತ್ತಿದೆ. ಈಗಾಗಲೇ ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರ ವಲಯಗಳಿಗೆ ಹೆಚ್ಚುವರಿ ವ್ಯಾಪ್ತಿಯನ್ನು ಸೇರಿಸಿಕೊಳ್ಳಲು ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಭವಿಷ್ಯದಲ್ಲಿ 10 ಲಕ್ಷ ಜನಸಂಖ್ಯೆಗೆ ಅನುಗುಣವಾಗಿ ನಗರವನ್ನು ವಿಸ್ತರಿಸುವ ಯೋಜನೆ ರೂಪಿಸಬೇಕು ಎಂದು ಶಾಸಕರು ಸಲಹೆ ನೀಡಿದರು.

ನೂತನ ಕಚೇರಿ ಕಟ್ಟಡಕ್ಕೆ 7 ಕೋಟಿ ಅನುದಾನ ಪ್ರಸ್ತಾವ;ನಗರ ಸೌಂದಯರ್ಕರಣಕ್ಕೆ ವಿಶೇಷ ಯೋಜನೆ: ಸಭೆಯಲ್ಲಿ ಪುರಸಭೆ ಆವರಣದಲ್ಲಿ ನೂತನ ಕಚೇರಿ ಕಟ್ಟಡ ನಿರ್ಮಾಣಕ್ಕಾಗಿ 7 ಕೋಟಿ ರೂಪಾಯಿಗಳ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಕ್ರಿಯಾ ಯೋಜನೆ ಸಲ್ಲಿಸುವುದಕ್ಕೆ ಒಪ್ಪಂದ ನೀಡಲಾಯಿತು.

ಪ್ರಸ್ತುತ ಕಚೇರಿ ಕಟ್ಟಡವು ಹಳೆಯದ್ದು ಮತ್ತು ಸೌಲಭ್ಯಗಳ ಕೊರತೆಯಿದ್ದು, ಈ ಹೊಸ ಕಟ್ಟಡವು ಡಿಜಿಟಲ್ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸಲಾಗುತ್ತದೆ ಎಂದು ಮುಖ್ಯಾಧಿಕಾರಿ ಸಂಗಮೇಶ್ ಪನ್‌ಶೆಟ್ಟಿ ಅವರು ತಿಳಿಸಿದರು.

ಪುರಸಭೆ ವ್ಯಾಪ್ತಿಯಲ್ಲಿ ನಗರ ಸೌಂದರ್ಯಕರಣಕ್ಕಾಗಿ ವಿಶೇಷ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ನಿರ್ಧಾರ ಕೈಗೊಳ್ಳಲಾಯಿತು. ಇದರಲ್ಲಿ ಪಾರ್ಕ್‌ಗಳ ನಿರ್ಮಾಣ, ರಸ್ತೆಗಳ ಆಧುನೀಕರಣ, ಗಿಡಮಳೆಗಳು ಮತ್ತು ಲೈಟಿಂಗ್ ಸೌಲಭ್ಯಗಳನ್ನು ಸೇರಿಸಲಾಗುತ್ತದೆ. "ನಗರವನ್ನು ಹಸಿರು ಮತ್ತು ಸೌಂದರ್ಯಮಯವಾಗಿಸುವುದು ನಮ್ಮ ಆದ್ಯತೆ" ಮುಖ್ಯಮಂತ್ರಿಗಳು ಮುಂದಿನ ವರ್ಷದಲ್ಲಿ ಅನುದಾನ ನೀಡುವುದಾಗಿ ಹೇಳಿದ್ದಾರೆ ಎಂದು ಶಾಸಕರು ಹೇಳಿದರು.





# ಕನ್ಹೇರಿ ಶ್ರೀಗಳ ಪುರ ಪ್ರವೇಶ ನಿಬರ್ಂಧ:ಸಚಿವ ಪಾಟೀಲ ವಿರುದ್ಧ ಗುಡುಗಿದ ನಡಹಳ್ಳಿ



ವಿಜಯಪುರ,ಅ.20: ಕನ್ಹೇರಿ ಶ್ರೀಗಳ ಜಿಲ್ಲಾ ಪ್ರವೇಶದ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲರೇ ಕಾರಣ. ಈ ಹಿಂದೆಯೂ ರಂಭಾಪೂರಿ, ಶ್ರೀಶೈಲ ಜಗದ್ಗುರುಗಳ ಬಗ್ಗೆ ಅತ್ಯಂತ ಅಗೌರವಯುತವಾಗಿ ಅವರು ನಡೆದುಕೊಂಡಿದ್ದರು ಎಂದು ಮಾಜಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ.ಪಾಟೀಲ ವಿರುದ್ಧ ಹರಿ ಹಾಯ್ದರು.

ನಾಲ್ಕು ದಿನಗಳಲ್ಲಿ ಶ್ರೀಗಳ ನಿಷೇಧ ಆದೇಶ ವಾಪಸ್ಸು ಪಡೆಯದೇ ಹೋದರೆ ಬಬಲೇಶ್ವರ ಮತಕ್ಷೇತ್ರದಿಂದಲೇ ಹೋರಾಟ ಆರಂಭಿಸುವೆ ಎಂದು ನಡಹಳ್ಳಿ ಗುಡುಗಿದರು.

ವಿಜಯಪುರದಲ್ಲಿ ಕನ್ಹೇರಿ ಸ್ವಾಮೀಜಿಗಳ ಪ್ರವೇಶ ನಿಬರ್ಂಧವನ್ನು ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿ ಹಿಂದೂ ಜಾಗೃತ ವೇದಿಕೆ ನೇತೃತ್ವದಲ್ಲಿ ಡಾ.ಬಿ.ಆರ್. ಅಂಬೇಡ್ಕರ ವೃತ್ತದಲ್ಲಿ ನಡೆದ ಪ್ರತಿಭಟನಾ ರ್ಯಾಲಿಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಹಿಂದೆ ಪ್ರತ್ಯೇಕ ಲಿಂಗಾಯತ ಧರ್ಮ ಹೋರಾಟ ವೇಳೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲರು ರಂಭಾಪುರಿ, ಶ್ರೀಶೈಲ ಮೊದಲಾದ ಜಗದ್ಗುರುಗಳ ಬಗ್ಗೆ ನಡೆದುಕೊಂಡ ರೀತಿ ಇಡೀ ಜನರಿಗೆ ಗೊತ್ತಿದೆ. ಈಗಲೂ ಅವರೇ ಕನ್ಹೇರಿ ಶ್ರೀಗಳ ಪ್ರವೇಶ ನಿಬರ್ಂಧದ ಹಿಂದೆ ಇದ್ದಾರೆ ಎಂದರು.ಪ್ರತ್ಯೇಕ ಲಿಂಗಾಯತ ಧರ್ಮ ಹೋರಾಟ ನಡೆಸಿದ ನೀವು ಹಿಂದೂ ಅಲ್ಲ ಎನ್ನುತ್ತೀರಿ. ಆದರೆ ಮನೆಯಲ್ಲಿ ಶ್ರೀ ಕೃಷ್ಣನ ಪೂಜೆ ಮಾಡುತ್ತೀರಿ. ಹಾಗಾದರೆ ನೀವು ಹಿಂದೂ ಎಂಬುದನ್ನು ಒಪ್ಪಿಕೊಳ್ಳಿ. ಆಡುವ ಮಾತು ಒಂದು. ನಡೆದುಕೊಳ್ಳುವುದು ಇನ್ನೊಂದು. ಈ ರೀತಿ ಒಡೆದಾಳುವ ಬಗ್ಗೆ ಲಿಂಗಾಯತ ಮಠಾಧೀಶರು ಎಚ್ಚೆತ್ತುಕೊಳ್ಳಬೇಕು ಎಂದರು.

ಧರ್ಮ ಕಾಲಂನಲ್ಲಿ ಹಿಂದೂ ಎಂದೇ ಬರೆಯಿಸಿ, ಲಿಂಗಾಯತ ಎಂದು ಬರೆಯಿಸಿ ಎಂದು ಹೇಳುವುದು ಒಡೆದಾಳುವ ಪ್ರಯತ್ನ. ಈ ಪ್ರಯತ್ನಕ್ಕೆ ಬಲಿಯಾಗಬೇಡಿ ಎಂದರು.

ಸಾವಯುವ ಬೀಜ ಪ್ರಮಾಣನ ಸಂಸ್ಥೆ ಮಾಜಿ ಅಧ್ಯಕ್ಷ ವಿಜುಗೌಡ ಪಾಟೀಲ ಮಾತನಾಡಿ, ಕನ್ಹೇರಿ ಶ್ರೀಗಳು ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಅಪ್ಪಟ ಶಿಷ್ಯರು, ಅವರಿಗೆ ಮಾಡಿರುವ ಅಪಮಾನ ನಡೆದಾಡುವ ದೇವರು ಶ್ರೀ ಸಿದ್ದೇಶ್ವರ ಸ್ವಾಮೀಜಿಗಳಿಗೆ ಮಾಡಿದ ಅಪಮಾನವಾಗಿದೆ. ಇದನ್ನು ನಾವು ಸಹಿಸುವುದಿಲ್ಲ. ನಿಬರ್ಂಧ ಆದೇಶ ಹಿಂಪಡೆಯದಿದ್ದರೆ ದೊಡ್ಡ ಹೋರಾಟಕ್ಕೆ ಅಣಿಯಾಗಬೇಕಾಗುತ್ತದೆ ಎಂದರು.

ಸಹಕಾರಿ ಧುರೀಣ ರಮೇಶ ಬಿದನೂರ ಮಾತನಾಡಿ, ಕನ್ಹೇರಿ ಶ್ರೀಗಳ ಪೂರ್ವಾಶ್ರಮ ವಿಜಯಪುರ, ಇಲ್ಲಿಯೇ ಅವರಿಗೆ ಪ್ರವೇಶ ನಿಬರ್ಂಧಿಸಿರುವುದು ಅತ್ಯಂತ ನೋವು ತರುವ ಸಂಗತಿಯಾಗಿದೆ. ಇಡೀ ವಿಜಯಪುರ ಅಷ್ಟೇ ಅಲ್ಲ. ಇಡೀ ಕರ್ನಾಟಕ ಅವರ ನಿಷೇಧ ವಾಪಸ್ಸು ಪಡೆಯುವಂತೆ ಒತ್ತಾಯಿಸುತ್ತಿದೆ.ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವರು ಜನರ ಭಾವನೆಗಳಿಗೆ ಸ್ಪಂದಿಸಬೇಕು ಎಂದರು.

# ಪ್ರವಾಹ ಸಂಕಷ್ಟಕ್ಕೆ ಸಿಲುಕಿ ಸಂಪೂರ್ಣ ಮುಳುಗಡೆಯಾಗಿದ್ದ ಕಡಬೂರಲ್ಲಿ ಉಚಿತ ವೈದ್ಯಕೀಯ ಶಿಬಿರ

ವಾಡಿ.ಅ.20:ಚಿತ್ತಾಪುರ ತಾಲೂಕಿನ ಕಡಬೂರ ಗ್ರಾಮದಲ್ಲಿ ಉಚಿತ ವೈದ್ಯಕೀಯ ಶಿಬರ ನಡೆಯಿತು. ಅಖಿಲ ಭಾರತ ರ?ತ ಕೃಷಿ ಕಾರ್ಮಿಕ ಸಂಘಟನೆ (ಎಐಕೆಕೆಎಂಎಸ್) ಹಾಗೂ ಮೇಡಿಕಲ್ ಸರ್ವಿಸ್ ಸೆಂಟರ್ (ಎಂಎಸ್ಸಿ) ಸಂಘಟನೆಗಳು ಜಂಟಿಯಾಗಿ ಶನಿವಾರ ಗ್ರಾಮದ ಗ್ರಂಥಾಲಯ ಕಟ್ಟಡದಲ್ಲಿ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಕಡಬೂರ ಗ್ರಾಮದ ಬಹುತೇಕ ಜನರು ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ಪಡೆದುಕೊಂಡರು. ಪ್ರವಾಹ ತಗ್ಗಿದ ನಂತರ ಎದುರಾದ ಮಲೇರಿಯಾ, ಚರ್ಮರೋಗ, ವಾಂತಿ ಬೇಧಿ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳಿಂದ ಬಳಲಿದ ಮಕ್ಕಳು,ಮಹಿಳೆಯರು, ವೃದ್ಧರು ವ?ದ್ಯರ ಸಲಹೆ ಪಡೆದು ಮಾತ್ರೆ ಔಷಧಗಳನ್ನು ಪಡೆದುಕೊಂಡರು.

ಈ ವೇಳೆ ಮಾತನಾಡಿದ ಮೇಡಿಕಲ್ ಸರ್ವಿಸ್ ಸೆಂಟರ್ ನ ಡಾ.ಸೀಮಾ ದೇಶಪಾಂಡೆ, ಭೀಮಾನದಿ ಮತ್ತು ಕಾಗಿಣಾ ನದಿಗಳ ಪ್ರವಾಹದಿಂದ ಕಲಬುರಗಿ ಜಿಲ್ಲೆಯ ಹಲವು ನದಿ ದಂಡೆಗಳ ಗ್ರಾಮಗಳು ಜಲಪ್ರಳಯಕ್ಕೆ ತುತ್ತಾಗಿವೆ. ಕಡಬೂರ, ಕುಂದನೂರ, ಚಾಮನೂರ, ಹೊನಗುಂಟಾ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಜನರು ರೋಗ ರುಜಿನುಗಳಿಂದ ಬಳಲುತ್ತಿದ್ದಾರೆ. ಪರಿಣಾಮ ಜನರ ಆರೋಗ್ಯ ಕಾಳಜಿಯಿಂದ ಪ್ರವಾಹ ಪೀಡಿತ ಗ್ರಾಮಗಳಲ್ಲಿ ವ?ದ್ಯಕೀಯ ಶಿಬಿರ ಆಯೋಜನೆ ಮಾಡಲಾಗುತ್ತಿದೆ ಎಂದು ಹೇಳಿದರು.

ವ?ದ್ಯರಾದ ಡಾ. ಸುಧೇಂದ್ರ ಎನ್, ಡಾ.ದಿವ್ಯಾ. ಪಿ, ಡಾ. ವರ್ಷಾ ಆರ್. ಬಿ, ಡಾ. ಉಪೇಂದ್ರ.ಎನ್, ಡಾ. ಸೀಮಾ ದೇಶಪಾಂಡೆ, ಡಾ. ಎಸ್. ಕೆ. ಶರತಕುಮಾರ, ಆರೋಗ್ಯ ಕ್ಷೇತ್ರಾಧಿಕಾರಿ ಮಂಜುಳಾ ಬುಳ್ಳಾ, ಮುಖಂಡರಾದ ಶ್ರೀಶ?ಲ್ ಕೆಂಚಗುಂಡಿ, ವೀರಭದ್ರಪ್ಪ ಆರ್. ಕೆ, ವೆಂಕಟೇಶ ದೇವದುರ್ಗ, ವಿಠ್ಠಲ್ ರಾಠೋಡ, ಶರಣು ಹೇರೂರ, ಮಹೇಶ ನಾಡಗೌಡ, ಹಣಮಂತ ಚವ್ಹಾಣ, ಗೌತಮ ಪರ್ತೂರಕರ, ಗೋಧಾವರಿ ಕಾಂಬಳೆ, ಬಾಸುಮಿಂಯ್ಯಾ ಹೊಸಮನಿ, ಸಿದ್ದಪ್ಪ, ಗೊವಿಂದ ಯಳವಾರ, ರಾಜು ಒಡೆಯರಾಜ ಸೇರಿದಂತೆ ಇತರರು ಪಾಲ್ಗೊಂಡಿದ್ದರು. ಗ್ರಾಮದ ನೂರಾರು ಜನರು ಆರೋಗ್ಯ ತಪಾಸಣೆ ಮಾಡಿಕೊಂಡರು.



# ಶ್ರದ್ಧೆ, ಪ್ರಾಮಾಣಿಕತೆ, ಆತ್ಮವಿಶ್ವಾಸವೆಂಬುದನ್ನು ಪಾಲಿಸಿ:ಶಿವಲೀಲಾ



ತಾಳಿಕೋಟೆ:ಅ.20: ದೀಪದಾನವೆಂದರೆ ದೀಪವನ್ನು ಗೌರವದಿಂದ ಕಾಣುತ್ತೇವೆ ದೀಪ ಜ್ಞಾನದ ಬೆಳಕು ಎಂಬುದನ್ನು ಗುರುಗಳು ನೀಡುತ್ತಾರೆ ಅಂತಹದನ್ನು ಪಡೆದುಕೊಂಡ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಹಾಗೂ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ದಾರೆ ಎರೆಯುತ್ತಾರೆ ಅದಕ್ಕೆ ದೀಪದಾನ ಸಮಾರಂಭವೆಂದು ಹೇಳಲಾಗುತ್ತದೆ ಎಂದು ಸ್ಥಳೀಯ ಜಾನಪದ ಸಾಹಿತಿಗಳು ಹಾಗೂ ಸಹ ಶಿಕ್ಷಕರಾದ ಶ್ರೀಮತಿ ಶಿವಲೀಲಾ ಎಂ ಮುರಾಳ ಅವರು ನುಡಿದರು.

ಶನಿವಾರರಂದು ಸ್ಥಳೀಯ ವೀ.ವಿ.ಸಂಘದ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದ ಬಿಇಡಿ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳ ಕುರಿತು ಏರ್ಪಡಿಸಲಾದ ದೀಪದಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಅವರು ಒಂದು ಹಣತೆಯಿಂದ ಸಾವಿರಾರು ಹಣತೆಗಳು ಬೆಳಕು ನೀಡುತ್ತವೆ ಹಾಗೆ ನೀವು ಕೂಡಾ ಬೆಳಕು ನೀಡುವ ಕಾರ್ಯ ಮಾಡಿರಿ ಎಂದು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸಿದ ಶಿಕ್ಷಕಿ ಶಿವಲೀಲಾ ಅವರು ಶಾರದಾ ದೇವಿಯನ್ನು ಬೇಡಿಕೊಳ್ಳುತ್ತಾ ಅಜ್ಞಾನ ಅಂದಾಕಾರ ಹೋಗಲಾಡಲಿ ಎಂದು ಬೇಡಿಕೊಳ್ಳಲಾಗುತ್ತದೆ ಎಂದು 3 ಅಂಶಗಳ ಕುರಿತು ತಿಳಿಹೇಳಿದ ಅವರು ಸಿಸ್ತು ಮತ್ತು ಶ್ರದ್ದೆಯಿಂದ ಓದುವ ಕಾರ್ಯ ಮಾಡಿರಿ ಪ್ರಾಮಾಣಿಕ ತನದಿಂದ ಪ್ರಯತ್ನ ಮಾಡುತ್ತಾ ಆತ್ಮ ವಿಸ್ವಾಸವನ್ನು ಗಳಿಸಿಕೊಳ್ಳಿರಿ ಎಂದರು. ಓದುವಿನಲ್ಲಿ ಶ್ರದ್ದೆ ಎಂಬುದಿರಲಿ ಎಂಬುದನ್ನು ಪ್ರಸ್ತಾಪಿಸಿದ ಶಿಕ್ಷಕಿ ಶಿವಲೀಲಾ ಅವರು ಸಿಸ್ತು ಮತ್ತು ಶ್ರದ್ದೆ ಎಂಬುದರೊಂದಿಗೆ ತಮ್ಮ ಉದ್ಯೋಗವನ್ನು ಸೃಷ್ಠಿಸಿಕೊಂಡಂತಹ ವಿಜಯ ಶಂಕೇಶ್ವರ ಅವರ ಸಾದನೆ ಕುರಿತು ಹಾಗೂ ಸುಧಾಮೂರ್ತಿ ಅವರು ಸಾಧನೆ ಮಾಡಿದಲ್ಲದೇ ಲಕ್ಷಾಂತರ ಜನರಿಗೆ ಉದ್ಯೋಗ ಕಲ್ಪಿಸಿದ್ದಾರೆಂಬುದನ್ನು ಪ್ರಶಿಕ್ಷಣಾರ್ಥಿಗಳಿಗೆ ಮನವರಿಕೆ ಮಾಡಿದರು. ಮಕ್ಕಳು ಓದಿ ಬರೆದು ವಿದ್ಯಾವಂತರಾಗಲಿ ಎಂಬ ಉದ್ದೇಶ ಹೊತ್ತ ಮಾತಾಪಿತರನ್ನು ಎಂದು ಮರೆಯದೇ ಗೌರವದಿಂದ ಕಾಣಿರಿ ಎಂದು ಚಿಕ್ಕ ಕಥೆಯೊಂದನ್ನು ಹೇಳಿ ತಂದೆ ತಾಯಿಯ ಪ್ರೀತಿ ಹೇಗಿರುತ್ತದೆ ಎಂಬುದನ್ನು ಪ್ರಶಿಕ್ಷಣಾರ್ಥಿಗಳಿಗೆ ಮನವರಿಕೆ ಮಾಡಿದರು.

ಮಕ್ಕಳ ಬದುಕೇ ಮುಖ್ಯವೆಂಬುದನ್ನು ತಂದೆ ತಾಯಿಯವರು ಅರ್ಥೈಸಿಕೊಂಡಿರುತ್ತಾರೆ ಮಾನವೀಯ ಮೌಲ್ಯಗಳೆಂಬವುಗಳು ಜಾನಪದ ಸಾಹಿತ್ಯದಲ್ಲಿ ದೊರೆಯುತ್ತವೆ ಓದು ಎಂಬುದು ಬರೇ ಓದುವದಲ್ಲಾ ಅದರಲ್ಲಿದ್ದ ವಿಷಯ ಅರ್ಥೈಸಿಕೊಳ್ಳಬೇಕೆಂದು ಹೇಳಿದ ಅವರು ನಡೆ ನುಡಿ ಎರಡು ಒಂದಾಗಬೇಕೆಂಬ ಭಾವನೆ ಎಂಬುದು ಬಸವಾದಿ ಶರಣರದ್ದಾಗಿದೆ ಎಲ್ಲ ಗುರುಗಳ ಹಾಗೂ ಮಹಾ ವಿದ್ಯಾಲಯದ ಸಂಬಂದಿತ ಆಡಳಿತ ಮಂಡಳಿಯವರ ಶ್ರಮವೆಂಬುದು ಈ ಶ್ರೀ ಖಾಸ್ಗತೇಶ್ವರ ಎಂಬ ಸಂಸ್ಥೆಯಲ್ಲಿ ಅಡಗಿದ್ದರಿಂದಲೇ ಸಂಸ್ಥೆಯ ಹೆಸರು ಎಲ್ಲಡೆಯಲ್ಲಿಯೂ ಹಬ್ಬಿ ಅದರ ಘನತೆ ಗೌರವವೆಂಬುದು ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ಇನ್ನೋರ್ವ ವೀ.ವಿ. ಸಂಘದ ನಿರ್ದೇಶಕರಾದ ಸಿ.ಆರ್.ಕತ್ತಿ ಅವರು ಮಾತನಾಡಿ ಎಲ್ಲ ವೃತ್ತಿಗಳಲ್ಲಿ ಶಿಕ್ಷಣ ವೃತ್ತಿ ಮಹತ್ವದ್ದಾಗಿದೆ ಇಲ್ಲಿ ಕಲೆತಂತ ವಿದ್ಯಾರ್ಥಿಗಳು ಉನ್ನತ ಹುದ್ದೆ ಪಡೆದಿದ್ದಾರೆ ಶಿಕ್ಷಣದ ವ್ಯವಸ್ಥೆ ಚೆನ್ನಾಗಿದ್ದರೆ

# ಅರಣ್ಯ ಒತ್ತುವರಿ ಮಾಡಿದರೆ ಕಠಿಣ ಕ್ರಮ, ಇ-ತ್ಯಾಜ್ಯ ಮರುಬಳಕೆಗೆ ಚಿಂತನೆ:ಈಶ್ವರ ಖಂಡ್ರೆ

ಕಲಬುರಗಿ,ಅ.20: ನೈಸರ್ಗಿಕ ಸಂಪತನ್ನು ಹಿತ-ಮಿತವಾಗಿ ಬಳಕೆ ಮಾಡದೆ ಮಾನವ ದುರಾಸೆಯಿಂದ ಅವ್ಯಾಹತವಾಗಿ ಬಳಕೆ ಮಾಡಿದ ಪರಿಣಾಮ ಇಂದು ಎಲ್ಲೆಡೆ ನೀರು, ಆಹಾರ, ಗಾಳಿ ಮಲೀನವಾಗಿ ನಾನಾ ಆರೋಗ್ಯ ಸಮಸ್ಯೆಗೆ ಕಾರಣವಾಗುತ್ತಿದೆ. ಪರಿಸರ ಸಮತೋಲನ ಕಾಪಾಡುವುದು ಅತೀ ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಯಾರಾದರು ಅರಣ್ಯ ಒತ್ತುವರಿ ಮಾಡಿದರೆ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ್ ಬಿ. ಖಂಡ್ರೆ ಹೇಳಿದರು.

ಶನಿವಾರ ಕಲಬುರಗಿ ನಗರದ ರಿಂಗ್ ರಸ್ತೆಯ ಕೆ.ಸಿ.ಟಿ. ಇಂಜನಿಯರಿಂಗ್ ಕಾಲೇಜು ಮೈದಾನದಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲಾಡಳಿತ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವುಗಳ ಸಹಯೋಗದಲ್ಲಿ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಸ್ಥಾಪನೆಗೊಂಡು 50 ವರ್ಷಗಳಾದ ಹಿನ್ನೆಲೆಯಲ್ಲಿ ಸುವರ್ಣ ಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದು ವಿಶ್ವಕ್ಕೆ ಪರಿಸರ ಸಮತೋಲನ ಕಾಪಾಡುವುದೇ ದೊಡ್ಡ ಸವಾಲಾಗಿದೆ. ಕೋವಿಡ್ ಮಹಾಮಾರಿಯಲ್ಲಿ ಆಮ್ಲಜನಕ ಕೊರತೆಯಿಂದ ಲಕ್ಷಾಂತರ ಜನ ಸಾವನಪ್ಪಿರುವ ಕರಾಳ ಘಟನೆ ಕಣ್ಮುಂದಿದೆ ಎಬುದನ್ನು ಯಾರು ಮರೆಯಬಾರದು. ಪರಿಸರ ಉಳಿದರೆ ಮಾತ್ರ ಭವಿಷ್ಯದ ಜೀವನ ಎಂಬುದನ್ನು ಅರಿಯಬೇಕು ಎಂದರು.ಇತ್ತೀಚೆಗೆ ಕಂಪ್ಯೂಟರ್ ಮತ್ತು ಮೋಬೈಲ್ ಬಳಕೆ ಹೆಚ್ಚಾಗಿರಿಂದ ಕೆಟ್ಟು ಹೋದ ಈ ವಸ್ತುಗಳಿಂದ ಮನೆಗಳಲ್ಲಿ ಇ-ತ್ಯಾಜ್ಯ ಹೆಚ್ಚಾಗಿ ಉತ್ಪತ್ತಿ ಯಾಗುತ್ತಿದೆ. ಈ ಕುರಿತು ಇದನ್ನು ಮರುಬಳಕೆ ಅಥವಾ ವೈಜ್ಞಾನಿಕ ವಿಲೇವಾರಿಗೆ ಚಿಂತನೆ ನಡೆದಿದೆ.ಇದಲ್ಲದೆ ಆಸ್ಪತ್ರೆಗಳಲ್ಲಿ ಉತ್ಪತ್ತಿಯಾಗುವ ವೈದ್ಯಕೀಯ ಘನತ್ಯಾಜ್ಯ ಎಲ್ಲೆಂದಲ್ಲಿ ಬಿಸಾಡಿದಲ್ಲಿ ಅದು ಪ್ರಾಣಿಗಳು ಮತ್ತು ಕಸ ಸಂಗ್ರಹಿಸುವ ಪೌರ ಕಾರ್ಮಿ ಕರ ಜೀವಕ್ಕೆ ಆಪತ್ತು ಎದುರಾ ಗುತ್ತದೆ. ಹೀಗಾಗಿ ಆಸ್ಪತ್ರೆಗಳು ವೈದ್ಯಕೀಯ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು ಎಂದರು.100 ಕೋಟಿ ರೂ. ಮೊತ್ತದ ಅರಣ್ಯ ಆವಿಷ್ಕಾರಕ್ಕೆ ಅನುಮೋದನೆ: ಮುಂದಿನ 15 ದಿನದಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಡಿಮೆ ಅರಣ್ಯ ಪ್ರದೇಶದ 5 ಜಿಲ್ಲೆಗಳಲ್ಲಿ ಅರಣ್ಯ ಇಲಾಖೆ ಮತ್ತು ಕೆ.ಕೆ.ಆರ್.ಡಿ.ಬಿ ಮಂಡಳಿಯ 50-50 ಯೊಜನೆಯಡಿ 100 ಕೋಟಿ ರೂ. ಮೊತ್ತದ ಅರಣ್ಯ ಆವಿಷ್ಕಾರ ಕಾರ್ಯಕ್ರಮದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ ಅರಣ್ಯೀಕರಣ ಕೆಲಸ ಪ್ರಾರಂಭಿಸಲಾಗುವುದು. ಇದರಲ್ಲಿ ಹೆಚ್ಚಿನ ಬಿಸಿಲಿಗೆ ಖ್ಯಾತಿಯಾಗಿರುವ ಕಲಬುರಗಿಯಲ್ಲಿಯೆ 25 ಕೋಟಿ ರೂ. ಖರ್ಚು ಮಾಡಿ ಸೂರ್ಯ ನಗರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ಈಶ್ವರ ಬಿ. ಖಂಡ್ರೆ ತಿಳಿಸಿದರು.

ಕಲಬುರಗಿಯಲ್ಲಿ ಈಗಾಗಲೆ ಲುಂಬಿನಿ ಉದ್ಯಾನವನ ಸ್ಥಾಪಿಸಲಾಗಿದೆ. 33 ಕೋಟಿ ರೂ. ವೆಚ್ಚದಲ್ಲಿ ಚಿತ್ತಾಪುರ ತಾಲೂಕಿನ ಮಾಡಬೂಳದಲ್ಲಿ ಪ್ರಾಣಿ ಸಂಗ್ರಹಾಲಯು ಸ್ಥಾಪಿಸಲಾಗುತ್ತಿದೆ. ಹುಲಿ, ಸಿಂಹ ಸೇರಿದಂತೆ ಅನೇಕ ವನ್ಯಜೀವಿಗಳನ್ನು ಇಲ್ಲಿ ಕಾಣಬಹುದಾಗಿದೆ.











# ಸಚಿವ ಖರ್ಗೆಗೆ ಬೆದರಿಕೆ ಸೂಕ್ತ ಕಾನೂನು ಕ್ರಮಕ್ಕೆ ಆಗ್ರಹಿಸಿ ಮನವಿ



ಕಾಳಗಿ.ಅ.20:ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಅವರಿಗೆ ಆರ್. ಎಸ್. ಎಸ್. ಕಾರ್ಯಕರ್ತರಿಂದ ದೂರವಾಣಿ ಮೂಲಕ ಜೀವ ಬೆದರಿಕೆ ಬಂದಿರುವ ಕುರಿತು ಕೇಸು ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಳಗಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ ಅಂಬೇಡ್ಕರ್ ವೃತದಲ್ಲಿ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಜಿಲ್ಲಾ ಪಂಚಾಯತ ಮಾಜಿ ಸದಸ್ಯ ರಾಜೇಶ ಗುತ್ತೇದಾರ ಅವರು ಆರ್.ಎಸ್. ಎಸ್. ಸಂಘ ಪರಿವಾರದವರು ರಾಷ್ಟ್ರರಕ್ಷಣೆ ಧರ್ಮ ರಕ್ಷಣೆ ಮತ್ತು ಗೋರಕ್ಷಣೆ ಎಂಬ ಹೆಸರಿನಲ್ಲಿ ಗಣವೇಶಧಾರಿಗಳ ಮೂಲಕ ಕೈಯಲ್ಲಿ ಲಾಠಿ ಹಿಡಿದು ಪಥಸಂಚಲನ ನಡೆಸಿ, ಬೈಠಕ್ ಮಾಡುವ ಹೆಸರಿನಲ್ಲಿ ಸಮಾಜದಲ್ಲಿ ಕೋಮುವಾದಿ ವಿಷ ಬೀಜ ಬಿತ್ತುವ ಮೂಲಕ ಜನರಲ್ಲಿ ಅಶಾಂತಿ ಉಂಟುಮಾಡುತ್ತಿದ್ದಾರೆ.

ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಅವರು ಮಾತಾಡಿ ಸೌಹಾರ್ದತೆ ಕಾಪಾಡಲು ಕ್ರಮ ಕೈಗೊಳ್ಳುವಂತೆ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

ಈ ನಿಟ್ಟಿನಲ್ಲಿ ಆರ್.ಎಸ್.ಎಸ್.ಸಂಘದ ಅನಾಮದೇಯ ವ್ಯಕ್ತಿಯೊಬ್ಬರು ತಮ್ಮ ಮೊಬೈಲ್ ಮೂಲಕ ಸಚಿವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಜೀವಬೆದರಿಕೆ ಹಾಕುತ್ತಿರುವದನ್ನು ಮತ್ತು ಅಪಮಾನ ಮಾಡುತ್ತಿರವದನ್ನು ಉಗ್ರವಾಗಿ ಖಂಡಿಸುತ್ತೇವೆ ಎಂದರು.

ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಸುಭಾಷ ರಾಠೋಡ, ಪಂಚ ಗ್ಯಾರಂಟಿ ಯೋಜನೆ ಅಧ್ಯಕ್ಷ ರಾಘವೇಂದ್ರ ಗುತ್ತೇದಾರ, ಶಿವಶರಣಪ್ಪ ಕಮಲಾಪುರ,ಯುವ ಕಾಂಗ್ರೆಸ್ ಅಧ್ಯಕ್ಷ ಪ್ರದೀಪ್ ಡೊಣ್ಣೂರ, ನಗರ ಘಟಕ ಅಧ್ಯಕ್ಷ ವೇದಪ್ರಕಾಶ ಮೋಟಗಿ, ಎಸ್. ಸಿ. ಘಟಕ ಅಧ್ಯಕ್ಷ ಶಂಕರ ಹೇರೂರ, ಎನ್.ಎಸ್.ಯು.ಐ ಅಧ್ಯಕ್ಷ ಅವಿನಾಶ ಕೊಡದೂರ, ಶರಣು ಮಜ್ಜಗಿ, ದಿನೇಶ ಮೋಘಾ, ಚಿಂತನ ರಾಠೋಡ, ಸಂತೋಷ ಪತಂಗೆ, ಸಂತೋಷ ಕಡಬುರ, ವಿಠ್ಠಲ್ ಸೇಗಾಂವಕರ, ಅಮೃತರಾವ ಪಾಟೀಲ, ರವಿದಾಸ ಪತಂಗೆ, ಸಂತೋಷ ನರನಾಳ, ಬಸವರಾಜ ಮಡಿವಾಳ, ದತ್ತು ಗುತ್ತೇದಾರ, ಪರಮೇಶ್ವರ ಕಟ್ಟಿಮನಿ, ಸಂಗಮೇಶ ಬಡಿಗೇರ, ಶಿವಕುಮಾರ ಚಿಂತಕೋಟಿ, ಪರಮೇಶ್ವರ ಮಡಿವಾಳ, ಬಾಬುರಾವ ಡೊಣ್ಣೂರ, ಮಲ್ಲಿಕಾರ್ಜುನ ಗವಾರ, ರೇವಣಸಿದ್ಧಪ್ಪ ಕಟ್ಟಿಮನಿ, ತಾಯಪ್ಪ ದಂಡಗುಲ್ಕರ್, ರಂಗಪ್ಪ ಜಾಧವ, ಕೃಷ್ಣ ಕಟ್ಟಿಮನಿ, ಪ್ರದೀಪ್ ಹೇರೂರ ಸೇರಿದಂತೆ ಅನೇಕರಿದ್ದರು.

# ಮಹಾಲಕ್ಷ್ಮಿ ದೇವಿಯ ಜಾತ್ರೆ ಸಂಭ್ರಮ; ಅದ್ದೂರಿ ರಥೋತ್ಸವ

ಜೇವರಗಿ,ಅ.20: ಪಟ್ಟಣದ ಆರಾಧ್ಯ ದೇವತೆ ಮಹಾಲಕ್ಷ್ಮಿ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ಸಹಸ್ರಾರು ಭಕ್ತರ ಜಯಘೋಷಗಳ ನಡುವೆ ಅದ್ದೂರಿ ರಥೋತ್ಸವ ಜರುಗಿತು.

ಜಾತ್ರೆ ನಿಮಿತ್ತ ಮಹಾಲಕ್ಷ್ಮಿ ಟ್ರಸ್ಟ್ ಕಮಿಟಿಯಿಂದ ಹಲವಾರು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ರಥೋತ್ಸವದ ಅಂಗವಾಗಿ–ದೇವಸ್ಥಾನದಲ್ಲಿ ವಿಶೇಷ ಪೂಜೆ ಅಲಂಕಾರ ಸೇರಿದಂತೆ ವಿವಿಧ

ಕಾರ್ಯಕ್ರಮಗಳು ವಿಧಿವತ್ತಾಗಿ ನಡೆದವು.ಬೆಳಿಗ್ಗೆ 10.30 ಗಂಟೆಗೆ ಕೆಕೆಆರ್‌ಡಿಬಿ ಅಧ್ಯಕ್ಷ, ಶಾಸಕ ಡಾ.ಅಜಯ ಸಿಂಗ್,–ತಹಶೀಲ್ದಾರ್ ಮಲ್ಲಣ್ಣ ಯಲಗೋಡ ರಥೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡಿದರು.

ದೇವಸ್ಥಾನದಿಂದ ಆರಂಭವಾದ ರಥೋತ್ಸವ ಅಖಂಡೇಶ್ವರ ರಾಜಬೀದಿ ಮೂಲಕ ಬುಟ್ಟಾಳ ರಸ್ತೆಯ ಸಜ್ಜನ ಕಲ್ಯಾಣ ಮಂಟಪದ ವರೆಗೆ ಸಾಗಿತು. ಈ ವೇಳೆಯಲ್ಲಿ ಭಕ್ತರು ಮಹಾಲಕ್ಷ್ಮಿ ಮಾತಾ ಕೀ ಜೈ, ಕಲ್ಕತ್ತಾಯಿ ಮಾತಾ ಕೀ ಜೈ, ಮರಗಮ್ಮ ಮಾತಾ ಕೀ ಜೈ ಎಂದು ಜಯಘೋಷ ಹಾಕುತ್ತಾ ರಥದ ಮೇಲೆ ಬಾಳೆ ಹಣ್ಣು, ಉತ್ತತ್ತಿ, ಬದಾಮಿ ಎಸೆದು ಹರಕೆ ತೀರಿಸಿದರು. ಮೆರವಣಿಗೆಯಲ್ಲಿ ಇನ್ನೂರಕ್ಕೂ ಹೆಚ್ಚು ಡೊಳ್ಳು, ಹಲಗೆ, ಕೋಲಾಟ, ಲೇಜಿಮ್, ಡಿಜೆ ಸೌಂಡಿಗೆ ಯುವಕರು, –ಯುವತಿಯರು ನೃತ್ಯ ಮಾಡಿ ಸಂಭ್ರಮಿಸಿದರು.

ಆಯಿ ತಳದಲ್ಲಿ ಉತ್ಸವ ಮೂರ್ತಿ ಪ್ರತಿಷ್ಠಾಪನೆ: ನಂತರ ತಳವಾರಪ್ರಮುಖ ಸಮುದಾಯದ ಭಕ್ತರು ದೇವಿಯ ಮೂರ್ತಿಯನ್ನು ರಥದ ಸಮೇತ ಹೆಗಲ ಮೇಲೆ ಹೊತ್ತುಕೊಂಡು ಸುಮಾರು 3ಕಿ.ಮೀ ಅಂತರದಲ್ಲಿರುವ ಏಳು ಊರಿನ ಸೀಮೆಯ ಮಧ್ಯದಲ್ಲಿ ಬರುವ ಆಯಿ ತಳದಲ್ಲಿ ಉತ್ಸವ ಮೂರ್ತಿ ಪ್ರತಿಷ್ಠಾಪನೆ ಮಾಡಿದರು. ರಥೋತ್ಸವಕ್ಕೂ ಮುನ್ನ ನಸುಕಿನ ಜಾವದಿಂದ ಭಕ್ತರು ದರ್ಶನಪಡೆದರು. ಮುತ್ತೈದೆಯರು ದೇವಿಗೆ ಉಡಿ ತುಂಬಿದರು.

ಸೊನ್ನದ ಡಾ. ಶಿವಾನಂದ ಸ್ವಾಮೀಜಿ, ಶಕಾಪುರದ ಸಿದ್ದರಾಮ ಶಿವಾಚಾರ್ಯರು, ಶಾಸಕ ಅಲ್ಲಮಪ್ರಭು ಪಾಟೀಲ, ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಎಂ. ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣಕುಮಾರ ಪಾಟೀಲ ಹರವಾಳ, ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ, ದೇವಸ್ಥಾನದ ಟ್ರಸ್ಟ್ ಕಮಿಟಿ ಅಧ್ಯಕ್ಷ ಷಣ್ಮುಖಪ್ಪ ಸಾಹ ರಮೇಶಬಾಬು ವಕೀಲ್, ಸೋಮಣ್ಣ ಕಲ್ಲಾ, ಷಣ್ಮುಖಪ್ಪ ಹಿರೇಗೌಡ, ರಾಜಶೇಖರ ಸೀರಿ, ದಂಡಪ್ಪಗೌಡ ಪೊಲೀಸ್ ಪಾಟೀಲ, ಗುರುಗೌಡ ಮಾಲಿಪಾಟೀಲ್, ಜಗದೀಶ್ ವಿಶ್ವಕರ್ಮ, ಗುಂಡು ಬಡಿಗೇರ, ಗಣೇಶ ಮಹೇಂದ್ರಕರ್, ಈರಯ್ಯಸ್ವಾಮಿ ಘಂಟಮಠ, ರವಿ ಕೋಳಕೂರ, ಕರಣ ಗೌಡ ಸರಡಗಿ, ರಾಮಣ್ಣ ಪೂಜಾರಿ, ರಾಜು ತಳವಾರ, ಭೀಮು ತಳವಾರ, ಹರಿಶ್ಚಂದ್ರ ಕೊಡಚಿ,ದೇವಾನಂದ ಡೂಗನಕರ್, ಮರೆಪ್ಪ ಕೋಬಾಳಕರ್, ಭೀಮರಾಯ ಹಳ್ಳಿ, ಶರಣಬ ಗುತ್ತೇದಾರ, ತುಳಜಾರಾಮ ರಾಠೋಡ, ಪ್ರಭು ಜಾಧವ, ಶಿವಪ್ಪ ಮಡಿವಾಳಕರ್, ಭೀಮುಮಡಿವಾಳಕರ್ ಸೇರಿದಂತೆ ಪದಾಧಿಕಾರಿಗಳು, ಸಹಸ್ರಾರು ಭಕ್ತರು ಭಾಗವಹಿಸಿದ್ದರು.



# ಆರ್ ಎಸ್ ಎಸ್ ಪಥ ಸಂಚಲನ :ಅ.24ಕ್ಕೆ ವಿಚಾರಣೆ ಮುಂದೂಡಿದ ಹೈಕೋರ್ಟ್



ಕಲಬುರಗಿ:ಅ.20:ಜಿಲ್ಲೆಯ ಚಿತ್ತಾಪುರ ಪಟ್ಟಣದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನ ಕೈಗೊಳ್ಳಲು ಸ್ಥಳೀಯ ತಹಸೀಲ್ದಾರ್ ಅನುಮತಿ ನಿರಾಕರಿಸಿದ ಬೆನ್ನಲ್ಲೇ ಕಲಬುರಗಿ ಹೈಕೋರ್ಟ್ ಪೀಠ ಈ ನಿಟ್ಟಿನಲ್ಲಿ ಆರ್‌ಎಸ್‌ಎಸ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಕೈಗೊಂಡಿದ್ದು ನವೆಂಬರ್ 2ರಂದು ಪಥ ಸಂಚಲನ ಕೈಗೊಳ್ಳುವ ಆಯ್ಕೆಯನ್ನು ಮುಕ್ತವಾಗಿಟ್ಟು ಇದೇ ಅ.24ಕ್ಕೆ ವಿಚಾರಣೆ ಮುಂದೂಡಿದೆ.

ಭಾನುವಾರ ಚಿತ್ತಾಪುರ ಪಟ್ಟಣದಲ್ಲಿ ಪಥ ಸಂಚಲನ ಕೈಗೊಳ್ಳುವ ನಿಟ್ಟಿನಲ್ಲಿ ತಹಸೀಲ್ದಾರ್ ನಾಗಯ್ಯ ಹಿರೇಮಠ ಎದುರು ಆರ್‌ಎಸ್‌ಎಸ್ ಪ್ರಮುಖರು ಮನವಿ ಪತ್ರ ಸಲ್ಲಿಸಿದ್ದರಾದರೂ, ಕಾನೂನು ಸುವ್ಯವಸ್ಥೆ ಹದಗೆಡಬಾರದು ಎಂಬ ಲೆಕ್ಕಾಚಾರದೊಂದಿಗೆ ತಹಸೀಲ್ದಾರ್ ಅನುಮತಿ ನಿರಾಕರಿಸಿದ್ದರು. ಇನ್ನೊಂದೆಡೆ,ಭೀಮ್ ಆರ್ಮಿ ಹಾಗೂ ದಲಿತ ಪ್ಯಾಂಥರ್ ಸಹ ಇದೇ ಭಾನುವಾರ ಪಥ ಸಂಚಲನ ಕೈಗೊಳ್ಳುವ ಕುರಿತು ಅರ್ಜಿ ಸಲ್ಲಿಸಿದ್ದರಿಂದ ಸಂಘಟನೆಗಳ ಮಧ್ಯೆ ಪರಸ್ಪರ ಘರ್ಷಣೆ ಸಂಭವಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ತಹಸೀಲ್ದಾರ್ ಯಾವುದೇ ಸಂಘಟನೆಗೆ ಅನುಮತಿ ನೀಡಲು ನಿರಾಕರಿಸಿದ್ದರು.

ಈ ಎಲ್ಲ ಬೆಳವಣಿಗೆಗಳ ಮಧ್ಯೆ ಆರ್‌ಎಸ್‌ಎಸ್ ಕಲಬುರಗಿ ಜಿಲ್ಲಾ ಸಂಚಾಲಕ ಅಶೋಕ ಪಾಟೀಲ್ ಅವರು ಸಲ್ಲಿಸಿದ್ದ ಅರ್ಜಿಯ ಮೇರೆಗೆ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥ ಸಂಚಲನಕ್ಕೆ ಅನುಮತಿ ನಿರಾಕರಿಸಿದ ಹಿನ್ನೆಲೆಯಲ್ಲಿ ತಕ್ಷಣ ವಿಶೇಷ ಪೀಠ ಸ್ಥಾಪಿಸಿ ವಿಚಾರಣೆ ಕೈಗೊಳ್ಳಬೇಕು ಎಂದು ಆರ್‌ಎಸ್‌ಎಸ್ ಪರವಾಗಿ ನ್ಯಾಯವಾದಿ ಸತ್ಯನಾರಾಯಣ ಕಡ್ಲೂರ್ ಅರ್ಜಿ ಸಲ್ಲಿಸಿದ್ದರು.

ಅರ್ಜಿ ಪುರಸ್ಕರಿಸಿದ ಹೈಕೋರ್ಟ್ ನ್ಯಾಯಮೂರ್ತಿ ಎಂ.ಜಿ.ಎಸ್. ಕಮಲ್ ಅವರನ್ನು ಒಳಗೊಂಡ ವಿಶೇಷ ಪೀಠ ರಚಿಸಿದ ಕೂಡಲೆ ಇಂದು ಬೆಳಗ್ಗೆ ನ್ಯಾಯಮೂರ್ತಿ ಕಮಲ್ ಅವರು ಅರ್ಜಿಯ ವಿಚಾರಣೆ ಆರಂಭಿಸಿದರು.

ಈ ವೇಳೆ ವಿಚಾರಣೆ ಕೈಗೊಂಡ ನ್ಯಾಯಮೂರ್ತಿಗಳು ಏಕಕಾಲಕ್ಕೆ ಬೇರೆ ಬೇರೆ ಸಂಘಟನೆಗಳು ಹೀಗೆ ಪಥ ಸಂಚಲನ ಕೈಗೊಳ್ಳುವುದರಿಂದ ಶಾಂತಿ ಸುವ್ಯವಸ್ಥೆಗೆ ತೊಂದರೆ ಉಂಟಾಗುವ ಸಾಧ್ಯತೆ ತಳ್ಳಿ ಹಾಕುವಂತಿಲ್ಲ. ಹೀಗಾಗಿ, ಎಲ್ಲ ಸಂಘಟನೆಗಳಿಗೆ ಪ್ರತ್ಯೇಕ ದಿನದಂದು ಪಥ ಸಂಚಲನ ಕೈಗೊಳ್ಳಲು ಅನುಮತಿ ನೀಡಬಹುದಾಗಿದೆ ಎಂದು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದರು. ಮೇಲಾಗಿ, ಅಕ್ಟೋಬರ್ 24ರಂದು ಮಧ್ಯಾಹ್ನ 2.30ಕ್ಕೆ ವಿಚಾರಣೆ ಮುಂದೂಡಿದರು.

ಏತನ್ಮಧ್ಯೆ, ಆರ್‌ಎಸ್‌ಎಸ್ ಮತ್ತೊಮ್ಮೆ ಕಲಬುರಗಿ ಜಿಲ್ಲಾಧಿಕಾರಿಗಳ ಎದುರು ಅರ್ಜಿ ಸಲ್ಲಿಸಬೇಕು. ಜೊತೆಗೆ, ಯಾವ ಯಾವ ಮಾರ್ಗಗಳಲ್ಲಿ ಪಥ ಸಂಚಲನ ಕೈಗೊಳ್ಳಲಾಗುವುದು ಎಂಬುದರ ಸ್ಪಷ್ಟ ಲಿಖಿತ ಮಾಹಿತಿಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.

ಅರ್ಜಿಯ ಪ್ರತಿಯನ್ನು ಚಿತ್ತಾಪುರ ತಹಸೀಲ್ದಾರ್ ಮತ್ತು ಸ್ಥಳೀಯ ಪೊಲೀಸ್ ಠಾಣೆಗೂ ನೀಡಬೇಕೆಂದು ನ್ಯಾಯಮೂರ್ತಿಗಳು ನಿರ್ದೇಶನ ನೀಡಿದರು.

# ಆಳಂದನಲ್ಲಿ ಕರ್ನಾಟಕ ಭೀಮ ಸೇನೆಯಿಂದ ಪ್ರತಿಭಟನೆ

ಆಳಂದ:ಅ.20:ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಐಟಿಬಿಟಿ ಸಚಿವ ಪ್ರಿಯಾಂಕಾ ಖರ್ಗೆ ಅವರಿಗೆ ಜೀವ ಬೇದರಿಕೆ ಹಾಕಿದ ಆರೋಪಿಗಳನ್ನು ಬಂಧಿಸಿ ಅವರು ಉನ್ನತ ಭದ್ರತೆ ಒದಗಿಸಬೇಕು ಎಂಬ ಬೇಡಿಕೆ ಸೇರಿದಂತೆ ಸುಪ್ರೀಂಕೋರ್ಟ್ ನ್ಯಾಯಾಧೀಶ ಬಿ.ಆರ್. ಗವಾಯಿ ಅವರತ್ತ ಶೂ ಎಸೆದ ಪ್ರಕರಣ ಖಂಡಿಸಿ ಆರೋಪಿಗಳ ಕಠಿಣ ಶಿಕ್ಷೆ ವಿಧಿಸುವಂತೆ ಪಟ್ಟಣದಲ್ಲಿ ಕರ್ನಾಟಕ ಭೀಮ ಸೇನೆ ತಾಲೂಕು ಘಟಕದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.ಪಟ್ಟಣದ ಹಳೆ ತಹಸೀಲ್ದಾರ ಕಚೇರಿಯಿಂದ ಬಸ್ ನಿಲ್ದಾಣ ವರೆಗೆ ಶನಿವಾರ ಪ್ರತಿಭಟನೆ ನಡೆದ ಸೇನೆಯ ಜಿಲ್ಲಾ ಅಧ್ಯಕ್ಷ ಸಂಜಯ ಬೋಸಲೆ ಮತ್ತು ತಾಲೂಕು ಅಧ್ಯಕ್ಷ ನಾಗರಾಜ ಸಿಂಗೆ ನೇತೃತ್ವದದಲ್ಲಿ ಕಾರ್ಯಕರ್ತರು ಪ್ರತಿಭಟನೆ ಕೈಗೊಂಡು ತಹಸೀಲ್ದಾರ ಮೂಲಕ ರಾಜ್ಯ ಹಾಗೂ ಕೇಂದ್ರ ಗೃಹ ಸಚಿವರಿಗೆ ಪ್ರತ್ಯೇಕವಾಗಿ ಬೇಡಿಕೆ ಮನವಿ ಸಲ್ಲಿಸಿ ಒತ್ತಾಯಿಸಿದರು.ಮುಖಂಡರು ಮಾತನಾಡಿ, ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ಅವರನ್ನು "ಸಂವಿಧಾನ ವಿರೋಧಿ ಮತ್ತು ಜಾತಿವಾದಿ" ಎಂದು ಖಂಡಿಸಿ, ಕಠಿಣ ಕಾನೂನು ಕ್ರಮಕ್ಕೆ ಒತ್ತಾಯಿಸಿದರು.

ರಾಜ್ಯದ ಗ್ರಾಮೀಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಆರ್‌ಎಸ್‌ಎಸ್ ಕಾರ್ಯಕರ್ತರಿಂದ ಬಂದ ಜೀವ ಬೇದರಿಕೆ ಮತ್ತು ಅವಾಚ್ಯ ನಿಂದನೆಗಳನ್ನು ತೀವ್ರವಾಗಿ ಖಂಡಿಸಿದ ಅವರು, ಅಂತಹ ವ್ಯಕ್ತಿಗಳನ್ನು ಗಡಿಪಾರು ಮಾಡುವುದು ಮತ್ತು ಸಚಿವರಿಗೆ ಝಡ್+ ಸುರಕ್ಷತೆ ನೀಡಬೇಕು ಎಂದು ಆಗ್ರಹಿಸಿದರು.

"ದೇಶದಲ್ಲಿ ಎಲ್ಲರಿಗೂ ಒಂದೇ ಸಂವಿಧಾನ ಇದ್ದರೂ, ದಲಿತ ಸಚಿವರಿಗೆ ಜೀವ ಬೇದರಿಕೆ ಮತ್ತು ನಿಂದನೆ ಮಾಡುವುದು ಸಹ್ಯಿಸಲು ಆಗದು. ಸಾಮಾನ್ಯ ಜನರ ಗತಿ ಏನು? ಇಂತಹ ಮನುವಾದಿಗಳು ಸಂವಿಧಾನ ವಿರೋಧಿ ಕೆಲಸ ಮಾಡುತ್ತಿದ್ದಾರೆ. ಪ್ರಧಾನ ಮಂತ್ರಿ, ಗೃಹ ಸಚಿವರೇ, ಈ ಜಾತಿವಾದಿ ವಕೀಲ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಶಿಕ್ಷಿಸದಿದ್ದರೆ, ನಾವು ದೆಹಲಿ ಚಲೋ ಹೋರಾಟಕ್ಕೆ ಕರೆ ನೀಡುತ್ತೇವೆ. ಜಂತರ್ ಮಂತರ್‌ನಲ್ಲಿ ಮಹಾ ಪ್ರತಿಭಟನೆ ನಡೆಸಿ, ಸಂವಿಧಾನದ ರಕ್ಷಣೆಗಾಗಿ ಹೋರಾಡುತ್ತೇವೆ" ಎಂದು ಎಚ್ಚರಿಕೆ ನೀಡಿದರು. ಸಚಿವ ಖರ್ಗೆ ಅವರಿಗೆ ಸೂಕ್ತ ರಕ್ಷಣೆ ನೀಡುವುದು ಮತ್ತು ಸಂವಿಧಾನ ವಿರೋಧಿ ಚಟುವಟಿಕೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ರಾಜ್ಯ ಮತ್ತು ಕೇಂದ್ರದ ಗೃಹ ಸಚಿವರಿಗೆ ನಾಡ್ ತಹಸೀಲ್ದಾರ ಗುರಲಿಂಗಯ್ಯ ಸ್ವಾಮಿ ಅವರ ಮೂಲಕ ಪ್ರತ್ಯೇಕ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸೇನೆಯ ಜಿಲ್ಲಾ ಅಧ್ಯಕ್ಷ ಸಂಜಯ ಬೋಸಲೆ, ತಾಲೂಕು ಅಧ್ಯಕ್ಷ ನಾಗರಾಜ ಸಿಂಗೆ, ಉಪಾಧ್ಯಕ್ಷ ಜೈಭೀಮ ಸುಳ್ಳದ, ಪ್ರಧಾನ ಕಾರ್ಯದರ್ಶಿ ಮಹೇಶ ಪೋತೆ, ಕಾಯಾಧ್ಯಕ್ಷ ಮಹಾವೀರ ಕಾಂಬಳೆ, ಜಂಟಿ ಕಾರ್ಯದರ್ಶಿ ಅಮರ ಸಿಂಗೆ, ಯುವ ಅಧ್ಯಕ್ಷ ನಿತೀನ ಡೊಳೆ, ಉಪಾಧ್ಯಕ್ಷ ರವಿಕುಮಾರ ಆರೆ, ಕಾಯಾಧ್ಯಕ್ಷ ಅಜಯಕುಮಾರ ಹಬಾಡೆ, ಸಂಘಟನಾ ಕಾರ್ಯದರ್ಶಿ ಪ್ರಜ್ವಲ ಡೊಳೆ, ಜಂಟಿ ಕಾರ್ಯದರ್ಶಿ ಅಭಿಷೇಕ ಕಟ್ಟಿಮನಿ, ಜಿಲ್ಲಾ ಕಾರ್ಯದರ್ಶಿ ಶಿವುಪ್ರಸನ್ನ, ಜೈಭೀಮ ಸುಳ್ಳದ, ಆಸ್ಫಾಕ್ ಮುಲ್ಲಾ, ಮುತ್ತಣ್ಣಾ ಜಂಗಲೆ, ಹಿರಿಯ ಮುಖಂಡ ಬಾಬುರಾವ್ ಸುಳ್ಳದ, ಮಲ್ಲಿಕಾರ್ಜುನ ಮಂಡೆ, ವಿದ್ಯಕುಮಾರ ಕಾತ್ರಾಬಾದ, ದಿನೇಶ ಕಾತ್ರಾಬಾದ, ವಿಜಯಕುಮಾರ ಇಕ್ಕಳಕಿ, ಸೇರಿದಂತೆ ಅನೇಕರು ಭಾಗವಹಿಸಿದ್ದರು.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401